RNI/KARKAN NO: PRS :5 :2007.08

# ನೂಪುರ ಭ್ರಮರಿ

...ನರ್ತನ ಜಗತ್ತಿಗೊಂದು ಪರಿಭ್ರಮಣ

ಮಾರ್ಗಶಿರ–ಪೌಷ

ಸಂಪುಟ 3 ಸಂಚಿಕೆ 6

ಸಂಪಾದಕರು : ಮನೋರಮಾ. ಬಿ.ಎನ್

ವೆಬ್‌ಸೈಟ್ ವಿನ್ಯಾಸ : ಮಹೇಶ್ ಎಳ್ಯಡ್ಕ, ಧ್ಯೇಯ ಟೆಕ್ನಾಲಜೀಸ್, ಬೆಂಗಳೂರು.

ವಿತರಣಾ ಮುಖ್ಯಸ್ಥ : ವಿಷ್ಣುಪ್ರಸಾದ್ ನಿಡ್ಡಾಜೆ

ಕಛೇರಿ ನಿರ್ವಹಣೆ : ರಾಜ್‌ಗೋಪಾಲ್.ಬಿ.ಎನ್

ಪ್ರಕಾಶನ : ‘ಸಾನಿಧ್ಯ’, ಮಡಿಕೇರಿ

ಪುಟ ವಿನ್ಯಾಸ ಹಾಗೂ ಮುದ್ರಣ : ಅಕ್ಷರೋದ್ಯಮ, ಮಂಗಳೂರು

## ಈ ಸಂಚಿಕೆಯಲ್ಲಿ .....

### ಹೇಮಂತ ಋತುಗಾನ

- ಮಂಜೀರ ............ 4
- ನುಡಿ ನಮನ ಅಂಜಲಿ : ಮರೆಯಾದ ಮಹಾಬಲ : ಕಳಚಿದ ಕೆರೆಮನೆಯ ಮತ್ತೊಂದು ಕೊಂಡಿ. ............ 6
- ಲಲಿತ ಲಹರಿ : ಗಿರಿಜಾ ಕಲ್ಯಾಣ ............ 10
- ಹಸ್ತ ಮಯೂರಿ : ಸಿಂಹಮುಖ ಹಸ್ತ ............ 13
- ದೀವಟಿಗೆ : Dance Jatre : An Artistic Hub for Art Lovers ............ 15
- ನರ್ತನ ಸುರಭಿ : ನೃತ್ಯ– ಅಂದು, ಇಂದು, ಮುಂದು ............ 16
- ರಂಗಭ್ರಮರಿ : ಮುರಳೀ ರವಳೀ. ............ 18
- ಒಳನೋಟ ............ 22
- ದರ್ಪಣ : ನೃತ್ಯ ರಂಗದ ಅನಭಿಷಿಕ್ತ ರಾಣಿ : ರುಕ್ಮಿಣೀ ............ 23
- ರಂಗಸ್ಥಳ : ಎಚ್ಚರ ತಪ್ಪಿದರೆ ರಾವಣನೂ ಹಾಸ್ಯಗಾರನಾಗುತ್ತಾನೆ ! ............ 25
- ನಿಮ್ಮ ಬರೆಹ ನಮ್ಮ ಓದು ............ 26

All rights reserved. Reproduction in any manner, electronic or otherwise, in whole or in part without prior written permission is prohibited. Views and Opinions expressed by authors in the articles published in NOOPURA BHRAMARI are their own and not of Noopura Bhramari.

Visit Our website : **www.noopurabhramari.com**
for the latest news, views and other updates.

ನೂಪುರ ಭ್ರಮರಿಗೆ ಲೇಖನ–ವಿವರ–ವಿಚಾರ–ಅಭಿಪ್ರಾಯ ಇತ್ಯಾದಿಗಳನ್ನು ಬರೆಯುವವರು ಪ್ರತೀ ತಿಂಗಳ 20 ನೇ ತಾರೀಕಿನ ಒಳಗಾಗಿ ಕಳಿಸಬೇಕಾಗಿ ಕೋರಿಕೆ.





## ಮಂಜೀರ

ಸಂಪಾದಕೀಯ ಬರೆಯಹೊರಟಾಗಲೆಲ್ಲಾ ಕಲೆಯ ವಿಸ್ತಾರದೊಳಗೆ ಆಗಿರುವ ಹುಳುಕುಗಳೇ ಏಕೆ ಕಣ್ಣ ಮುಂದೆ ಧುತ್ತನೆ ಬಂದು ನಿಲ್ಲುತ್ತವೋ ತಿಳಿಯದು. ಆದರೆ ಈ ಹುಳುಕುಗಳ ಮುಂದೆ ಕೆಲವೇ ಕೆಲವು ಒಳ್ಳೆಯತನಗಳೂ ಮುಚ್ಚಿ ಹೋಗುವ ಮಟ್ಟಿಗೆ ಸ್ಥಿತಿಯಿದೆ ಎಂದಾದರೆ, ಏನೋ ಎಡವಟ್ಟು ನಡೆಯುತ್ತಿದೆ ಎಂದು ಅಂದುಕೊಳ್ಳುವುದರಲ್ಲಿ ತಪ್ಪೇನಿಲ್ಲ. ಕಲೆಯ ಕುರಿತು ಯೋಚನೆ ಮಾಡುವಾಗೆಲ್ಲಾ ನಮ್ಮೊಳಗೆ ಕಂಡು, ಕೇಳಿದ, ಅನುಭವಿಸಿದ, ಆಗಿಹೋದ, ಆಗುತ್ತಿರುವ ಎಷ್ಟೋ ನಕಲುಗಳು, ಆಡಂಬರಗಳು, ಸಮಯಸ್ಫೂರ್ತಿಯಿಲ್ಲದ ಪ್ರಯೋಗಗಳು (?) ಅಣಕಿಸುವಾಗಲೆಲ್ಲಾ, ‘ಬರೆದೇ ಬಿಡುವ’ ಎಂಬ ಉತ್ಕಟಾಕಾಂಕ್ಷೆಯೊಂದು ಪಡಿಮೂಡುತ್ತದೆ. ಕಲೆ, ಕಲಾವಿದ, ಪೋಷಕ, ವಿದ್ಯಾರ್ಥಿ, ಸಭಿಕ, ಮಾಧ್ಯಮ.., ಹೀಗೆ ಎಲ್ಲದರ ಬಗೆಗೊಂದು ಭವಿಷ್ಯದ ಕುರಿತಾಗಿ ಸಣ್ಣ ಆತಂಕದ ಸುಳಿ ಝುಲ್ಲನೆ ಹಾದುಹೋಗುತ್ತದೆ. ಕೈಯ್ಯಲ್ಲಿ ಹಿಡಿದ ಪೆನ್ನು ಅದಾಗಿಯೇ ಹುಳುಕು-ಕೆಡುಕುಗಳ ಬಗ್ಗೆಯೇ ಬರೆಯತೊಡಗುತ್ತದೆ.

ಕಳೆದೆರಡು ಬಾರಿಯೂ ವಿಭಿನ್ನ ಸ್ತರಗಳಲ್ಲಿ ನಡೆಯುತ್ತಿರುವ ‘ಫ್ಯೂಷನ್’ ಎಂದು ಕರೆಸಿಕೊಂಡರೂ, ಅದು ಆಗಲಾರದೇ ಹೋಗುತ್ತಿರುವ, ವರ್ತಮಾನ ಮತ್ತು ಭವಿಷ್ಯದ ಆತಂಕಗಳನ್ನು ದುಪ್ಪಟ್ಟು ಮಾಡುತ್ತಿರುವ ಕುರಿತಾಗಿ ಬರೆದಿದ್ದೆ. ಮೊದಲನೇಯದು ಶಾಸ್ತ್ರೀಯ ನೃತ್ಯ ರಂಗಪ್ರವೇಶ ಎಂಬ ಎಡಬಿಡಂಗಿ ಸ್ಥಿತಿ; ಮತ್ತೊಂದು ಜಾನಪದದ ಸಹಜತೆಯನ್ನು ಧಿಕ್ಕರಿಸಿ ಶಾಸ್ತ್ರೀಯ ಅಂಶಗಳನ್ನು ಬೆರಕೆಪಾಕ ಮಾಡುತ್ತಾ ಎಲ್ಲೂ ಸಲ್ಲದ ಸಂಧಿಗ್ಧತೆಯನ್ನು ತರುತ್ತಿರುವ ಸೋಗಲಾಡಿತನ. ಎರಡೂ ತಮ್ಮಲ್ಲಿನ ಪರಂಪರೆಗಳನ್ನು, ಅದರ ಗಾಢ ಅಸ್ತಿತ್ವವನ್ನು ಧಿಕ್ಕರಿಸಿದ ಸಂಗತಿಗಳೇ. ಇತ್ತೀಚೆಗೆ ಧಾಡಸೀತನ ಇನ್ನೊಂದು ನೆಲೆಯಲ್ಲಿಯೂ ಅನಾವರಣಗೊಂಡಿದ್ದು ಮತ್ತೊಂದು ದೊಡ್ಡ ವಿಪರ್ಯಾಸ.

ಖ್ಯಾತನಾಮರೆನಿಸಿದ ನೃತ್ಯಪಟು. ನೃತ್ಯದ ವಿವಿಧ ಅಂಗ-ಅಂಶಗಳ ಬಗೆಗೆ ಅರಿವು-ಪಾಂಡಿತ್ಯವುಳ್ಳವರೆಂಬ ಹೆಗ್ಗಳಿಕೆ. ಆದರೆ ಪ್ರದರ್ಶನದ ವೇಳೆ ಕಂಡದ್ದೇನು? ಭರತನಾಟ್ಯ, ಕಥಕ್, ಕಥಕಳಿ- ಹೀಗೆ ಒಂದಷ್ಟು ವಿವಿಧ ನೃತ್ಯದ ಆಯಾಮಗಳ ಕಲಸುಮೇಲೋಗರ. ಕಾರಣ; ತಾವು ಕಲಿತ ಪಾಂಡಿತ್ಯವನ್ನೆಲ್ಲಾ ರಂಗಕ್ಕೆ ತರಬೇಕೆಂಬ ಹಠದಲ್ಲಿ ಕಲಾನುಭವ ಸೊನ್ನೆ ! ನಾಲ್ಕೈದು ದೋಣಿಗಳಿಗೆ ಕಾಲಿಟ್ಟು ಎಲ್ಲೂ ತಮ್ಮ ನೆಲೆಯನ್ನು ಕಂಡುಕೊಳ್ಳಲಾರದ ಇತ್ತಂಡ ! ಜೊತೆಗೆ ರಂಗದಲ್ಲೇ ಇರಿಸುಮುರಿಸಿನ ವರ್ತನೆ ; ವೇಷ-ಭೂಷಣಗಳನ್ನು ಸರಿಪಡಿಸುವುದು, ಬೆವರೊರೆಸುವುದು, ತಾದಾತ್ಮ್ಯತೆಯನ್ನು ಬಲವಂತವಾಗಿ ತರಿಸಿಕೊಳ್ಳುವುದು; ರಸ-ಭಾವದ ಒತ್ತಟ್ಟಿಗಿರಲಿ, ತಾಳ-ಲಯ ತಪ್ಪುವುದು ಕೂಡಾ ಮಾಮೂಲಿಯೆನ್ನಿಸುವಷ್ಟು! ವಿಪರ್ಯಾಸವೆಂದರೆ, ನಂತರದ ದಿನದಲ್ಲಿ ಮಾಧ್ಯಮಗಳಲ್ಲಿ ಅದ್ಭುತವೆನಿಸುವ ವರ್ಣನೆ!

ಕಲಾವಿದ ಕುಸಿಯುವುದು ಇಲ್ಲಿಯೇ? ಮಾತ್ರವಲ್ಲ ವಿಮರ್ಶೆ, ಕಲಾಪ್ರಯತ್ನಗಳು ಸೋಲುವುದೂ ಇಲ್ಲಿಯೇ ! ವಿಮರ್ಶೆಗಳು ವ್ಯಕ್ತಿಯ ಕಲಾವಂತಿಕೆ, ಪ್ರಜ್ಞೆಯನ್ನು ಹೆಚ್ಚು ಮಾಡಬೇಕೇ ವಿನಾ ಅಣಕ ಮಾಡುವುದಲ್ಲ. ಆದರೆ ಹೆಸರು, ಸ್ಥಾನ, ಪ್ರದೇಶದ ನಡವಳಿಕೆಗಳು ಉನ್ನತವಾಗಿದೆ ಎಂಬ ಮಾತ್ರಕ್ಕೆ ಕಳಪೆಯೆನಿಸುವ ಕಾರ್ಯಕ್ರಮವನ್ನೂ ಮರು ಮಾತಿಲ್ಲದೇ ಒಪ್ಪಿಕೊಂಡರೆ ಪ್ರಗತಿಯ ಸೋಪಾನಕ್ಕೆ ಇಟ್ಟ ಮುಳ್ಳು ; ಮಾತ್ರವಲ್ಲ, ನಮಗೆ ನಾವೇ ಮಾಡಿಕೊಳ್ಳುವ ಅಪಚಾರ. ಹೊಸ ಪ್ರಯೋಗವೆಂದ ಮಾತ್ರಕ್ಕೆ ಅದರ ಔಚಿತ್ಯ ನೋಡದೇ ಒಪ್ಪಿಕೊಳ್ಳುವುದು, ಹಳತು ಎಂದಾಕ್ಷಣ ಮೂಗು ಮುರಿಯುವುದು, ಇವೆರಡರ ನಡುವೆ ಪರಂಪರೆ, ಶಾಸ್ತ್ರವೆನ್ನುತ್ತಲೇ ಅದನ್ನು ವ್ಯವಸ್ಥಿತವಾಗಿ ಮಾಡುತ್ತಲೇ ಕಲೆಯನ್ನು ಹೆಣವನ್ನಾಗಿಸುವುದು.., ಒಟ್ಟಿನಲ್ಲಿ ನೃತ್ಯವೆಂದರೆ ಪ್ರದರ್ಶನದ ಉದ್ದೇಶವೇ ಪ್ರಾಥಮಿಕ ಮತ್ತು ಅಂತಿಮ ಗುರಿ ! ಇದು ಖ್ಯಾತನಾಮರ ತೆವಲಷ್ಟೇ ಅಲ್ಲ; ಬದಲಾಗಿ ಪುಟ್ಟ ಮಕ್ಕಳಾದಿಯಾಗಿ ಅವರ ಪೋಷಕರು, ಗುರುಶಿಕ್ಷಕರು ಎಲ್ಲರದ್ದೂ ಒಂದೇ ದೃಷ್ಟಿ ಏನೋ!

ಪ್ರತಿಭಾಹೀನರಿಗೆ ಶಾಸ್ತ್ರ ಒಂದು ರಕ್ಷಣೆ ; ಹಾಗೆಯೇ ಪ್ರತಿಭಾಹೀನರಿಗೆ ಪ್ರಯೋಗವೂ ಒಂದು ರಕ್ಷಣೆ. ಇದರ ಹೊರತಾಗಿಯೂ ಅಭ್ಯಾಸ ಮಾಡಿಕೊಳ್ಳಲಾಗದ ಉದಾಸೀನ, ರಂಗ ಮತು ಪ್ರೇಕ್ಷಕನೆಡೆಗಿನ ನಿರ್ಲಕ್ಷ್ಯ, ನೃತ್ಯ ಸಾಧ್ಯತೆಗಳಲ್ಲಿ ತಾವು ಈಗಾಗಲೇ ಕಂಡುಕೊಂಡ ಯಶಸ್ಸು, ಅತಿ ಆತ್ಮ ವಿಶ್ವಾಸ ; ಇವಿಷ್ಟಿದ್ದರೂ ಸಾಕು, ರಂಗದಲ್ಲಿ ಕಲಾವಿದ ಸೋತನೆಂದೇ ಅರ್ಥ.

ಆದರೂ ಬಹುಪಾಲು ಕಲಾವಿದರು ಸುರಕ್ಷಿತ ಜಾಗದಲ್ಲಿ ನಿಲ್ಲಲು ಬಯಸುತ್ತಾರೆ. ಅವರಿಗೆ ಎಲ್ಲಿ ತಮ್ಮ ಅಸ್ತಿತ್ವಕ್ಕೇ ಕುತ್ತು ಬರಬಲ್ಲುದೋ ಎಂಬ ಭಯ ! ಆದ್ದರಿಂದ ಶಾಸ್ತ್ರದ ಮೇಲೆ ಗೂಬೆ ಕೂರಿಸುತ್ತಾರೆ. ನಮ್ಮ ತಪ್ಪಲ್ಲ; ಅದು ಶಾಸ್ತ್ರೀಯತೆಯ 'ಶ್ರೇಷ್ಟತೆ' ಎಂದೆಲ್ಲಾ ಸಮಜಾಯಿಷಿ ಕೊಡುತ್ತಾರೆ. ಇದಕ್ಕೆ ಕುಣಿಯಲಾರದ ನರ್ತಕಿ ನೆಲ ಡೊಂಕು ಎನ್ನದೇ ವಿಧಿಯಿಲ್ಲ.

ಪ್ರತಿಭಾಶಾಲಿಯಾದವನು ಶಾಸ್ತ್ರಕ್ಕೆ ವಿರುದ್ಧವಾಗದಂತೆ ಶಾಸ್ತ್ರವನ್ನು ಬೆಳೆಸುತ್ತಾನೆ, ತಾನೂ ಬೆಳೆಯುತ್ತಾನೆ. ಪ್ರಯೋಗಗಳು ಶಾಸ್ತ್ರವಿರೋಧವಾಗಬಾರದು ; ಅಂತೆಯೇ ಶಾಸ್ತ್ರ ಪ್ರಯೋಗವಿರೋಧವಾಗಬಾರದೂ ಕೂಡಾ. ಹಾಗೆಂದು ಕಲಿತದ್ದನ್ನು ಬಿಡಬೇಕೆಂದು ಅರ್ಥವಲ್ಲ. ಆದರೆ ಕಲೆಗೆ ತರ್ಪಣ ಬಿಡುವ ಕೆಲಸವನ್ನೆಂದು ಮಾಡಬಾರದು. ಒಬಿದಂತೂ ನಿಜ; ಸತ್ತ್ವಶುದ್ಧಿಯಿರುವ ಕಲಾವಿದನಿಗೆ ಪರಂಪರೆಯ ಬಗ್ಗೆ ನಮ್ರತೆಯೂ ಇರುತ್ತದೆ; ಸ್ವಾನುಭವನಿಷ್ಠವಾಗಿ ಮಾಡಬೇಕೆನ್ನುವುದರ ಬಗ್ಗೆ ಆತ್ಮವಿಶ್ವಾಸವೂ ಇರುತ್ತದೆ. ನಮ್ಮ ನಡುವೆ ಅಂತಹುದೊಂದು ಪ್ರಜ್ಞೆ ನಿರಂತರ ಎಚ್ಚರವಿರಲಿ.

ಪ್ರೀತಿಯಿಂದ,
✍ ಸಂಪಾದಕರು

manorama@noopurabhramari.com





# ನುಡಿ–ನಮನ–ಅಂಜಲಿ



ಕೆರೆಮನೆ ಎಂದಾಕ್ಷಣ ಮನಸ್ಸಿಗೆ ಹೊಳೆಯುವುದು ಯಕ್ಷಗಾನ. ಅಂಥ ಮನೆತನ ಮತ್ತು ಕಲೆಯ ಅನರ್ಘ್ಯ ಪರಂಪರೆಯ ಕೊಂಡಿಯಾಗಿದ್ದ ಮಹಾಬಲರ ಜ್ಯೋತಿ ಅಸ್ತಂಗತವಾಗಿದೆ.

ಇಡಗುಂಜಿಯ ದೇವರ ಸನ್ನಿಧಿಯಲ್ಲಿ ಶ್ರೀರಾಮನ ಪಾತ್ರ ನಿರ್ವಹಿಸುತ್ತಿದ್ದಾಗಲೇ ಶಂಭು ಹೆಗಡೆ ಇಹಲೋಕದ ಯಾತ್ರೆ ಮುಗಿಸಿದ್ದರು. ಈ ದುಃಖ ಮಾಸುವ ಮುನ್ನವೇ ಅವರಣ್ಣ ಮಹಾಬಲರೂ ಹೊರಟು ಹೋಗಿರುವುದು ದೊಡ್ಡ ಆಘಾತ. ಕೆಲವು ತಿಂಗಳಿಂದ ವೃದ್ಧಾಪ್ಯ ಸಹಜ ಅನಾರೋಗ್ಯದಿಂದ ಬಳಲುತ್ತಿದ್ದ ಮಹಾಬಲ ಹೆಗಡೆ ವಿಟ್ಲ ಸಮೀಪದ ಅಳಿಕೆಯಲ್ಲಿರುವ ಪುತ್ರ, ಪ್ರಾಧ್ಯಾಪಕ ಡಾ. ರಾಮ ಹೆಗಡೆ ಅವರ ಮನೆಯಲ್ಲಿ ಮಧ್ಯಾಹ್ನ ಊಟ ಮಾಡುತ್ತಿದ್ದಾಗಲೇ ಕೊನೆಯುಸಿರೆಳೆದರು.

# ಮರೆಯಾದ ಮಹಾಬಲ :
# ಕಳಚಿದ ಕೆರೆಮನೆಯ ಮತ್ತೊಂದು ಕೊಂಡಿ

**ಬಾ**ಲ್ಯದಲ್ಲೇ ತಾಯಿಯಿಲ್ಲದ ತಬ್ಬಲಿ. ಅಪ್ಪಟ ತುಂಟ. ಪುಂಡಾಟ. ಆಲೆಮನೆಯ ಕೊಪ್ಪರಿಗೆಯಲ್ಲಿ ಉಚ್ಚೆ ಹುಯ್ಯುವ ಮಟ್ಟಿಗಿನ ದಾಂಧಲೆ. ಆದರೆ ಚಿಕ್ಕಪ್ಪ ಕೆರೆಮನೆ ಶಿವರಾಮ ಹೆಗಡೆಯವರಿಗೆ 'ಮಾಣಿ ಘಟಿಂಗನಾದರೆ ಕಷ್ಟ' ಎಂದು ಕಂಡದ್ದೇ ; ಮಹಾಬಲರ ೧೪ನೇ ವರ್ಷದಲ್ಲಿ ಬಂಕಿಕೊಂಡ್ಲ ಎಂಬ ಊರಲ್ಲಿ 'ವೃಷಸೇನ' ವೇಷ ಹಾಕಿಸಿದರು. ಹೀಗೆ, ರಂಗಕ್ಕೆ ಪ್ರವೇಶಿಸಿದ ಮಹಾಬಲರು ನಂತರ ಶರಧಿ ಗಂಭೀರ. ಕೊನೆಗೆ, ೬೦ಕ್ಕೂ ಅಧಿಕ ವರ್ಷ ರಂಗದ ಜೊತೆಗಿನ ಅವಿನಾಭಾವ ಸಂಬಂಧದ ಅನಂತರ ವೇಷ ಕಳಚಿ ರಂಗದಿಂದ ನಿವೃತ್ತರಾದುದು ೭೫ರ ಹರೆಯದಲ್ಲಿ.

ತಂದೆ ತಾಯಿ : **ಶ್ರೀರಾಮ ಹೆಗಡೆ – ಮಾದೇವಿ**
ಜನನ : **೧೯೨೭ರ ಜೂನ್ ೩೦ರಂದು.**
ಮರಣ : **ಅಕ್ಟೋಬರ್ ೩೦, ೨೦೦೯**
**(ತಮ್ಮ ೮೨ನೇ ವರ್ಷ ವಯಸ್ಸಿನಲ್ಲಿ)**

ಶಿಕ್ಷಣ : **ಚಿತ್ರಾಪುರದ ಶ್ರೀಪಾದರಾಯರಿಂದ ಹಿಂದೂಸ್ಥಾನಿ ಸಂಗೀತದ ಪ್ರಾರಂಭಿಕ ಅಭ್ಯಾಸ, ಅನಂತರ ಧಾರಾವಾಡದ ನಾರಾಯಣ ಮುಜುಂದಾರರಿಂದ ಹೆಚ್ಚಿನ ಸಂಗೀತ ಶಿಕ್ಷಣ, ನಾಲ್ಕನೇ ತರಗತಿ ವರೆಗೆ ವಿದ್ಯಾಭ್ಯಾಸ. ಕನ್ನಡ ಪರೀಕ್ಷೆಗಳಲ್ಲಿ ಉತ್ತೀರ್ಣ.**

ಮೇಳ ಅನುಭವ : **ಇಡಗುಂಜಿ, ಸಾಲಿಗ್ರಾಮ, ಅಮೃತೇಶ್ವರಿ, ಕಮಲಶಿಲೆ, ಬಚ್ಚಗಾರು.**

ಪ್ರಶಸ್ತಿ–ಪುರಸ್ಕಾರ : **ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ (೧೯೯೧), ಚೆನ್ನೈಯ ಶ್ರುತಿ ಸಂಸ್ಥೆ, ಬೆಂಗಳೂರಿನ ಗಾನಕಲಾ ಪರಿಷತ್, ಕರ್ನಾಟಕ ಜನಪದ–ಯಕ್ಷಗಾನ ಅಕಾಡೆಮಿಯ ಜೀವನ ಸಾಧನೆ ಪ್ರಶಸ್ತಿ (೨೦೦೫) ಸೇರಿದಂತೆ ಹಲವು ರಾಷ್ಟ್ರೀಯ ಮಟ್ಟದ ಪ್ರಶಸ್ತಿ.**

ಸಂಸಾರ : **ನಾಲ್ವರು ಮಕ್ಕಳು. ಮೊದಲ ಪುತ್ರಿ ಅನಸೂಯ ಹಾಗೂ ಎರಡನೇ ಮಗ ವಿಷ್ಣು ನಿಧನರಾಗಿದ್ದಾರೆ. ಪತ್ನಿ ಮಹಾದೇವಿ, ಪುತ್ರ ಪ್ರಾಧ್ಯಾಪಕ ಡಾ. ರಾಮ ಹೆಗಡೆ, ಪುತ್ರಿ ಲಲಿತ. ಖ್ಯಾತ ಹಿಂದೂಸ್ತಾನಿ ಗಾಯಕ ಪಂಡಿತ್ ಪರಮೇಶ್ವರ ಹೆಗಡೆ ಮಹಾಬಲರ ಅಳಿಯ.**

ಮಹಾಬಲ ಹೆಗಡೆ ದಕ್ಷಿಣೋತ್ತರ ಕನ್ನಡ ಜಿಲ್ಲೆಗಳ ಅಂದಿನ ಪ್ರಸಿದ್ಧ ಕಲಾವಿದರೆಲ್ಲರೊಂದಿಗೂ ಪಾತ್ರ ಹಾಕಿ ಕುಣಿದಿದ್ದರು. ೧೯೮೨ರಲ್ಲಿ ಭಾರತ ಸರ್ಕಾರದ ಸಾಂಸ್ಕೃತಿಕ ತಂಡದಲ್ಲಿ ಯಕ್ಷಗಾನವನ್ನು ಪ್ರತಿನಿಧಿಸಿ ಯುರೋಪ್ ದೇಶಗಳಲ್ಲಿ ಕಾರ್ಯಕ್ರಮ ನೀಡಿದ್ದರು. ಹಾಗಂತ ಮಹಾಬಲರನ್ನ ಯಕ್ಷಗಾನಕ್ಕೇ ಸೀಮಿತಗೊಳಿಸಿದರೆ ಅಪರಾಧವಾದೀತು. ಜೀವನವನ್ನು ಬೆಳಗಬಲ್ಲ ಕಲೆಗಳ ಹೂರಣದಲ್ಲಿ ಮಿಂದೆದ್ದವರು ಮಹಾಬಲರು. ಸಂಗೀತ, ಸಾಹಿತ್ಯ, ನಾಟಕ, ಭಜನೆ, ಮದ್ದಳೆವಾದನ..., ಹೀಗೆ ಎಲ್ಲದರಲ್ಲೂ ಅವರು ಮಹಾಬಲರೆ ! ಅವರು ದೀರ್ಘ ಕಾಲದಿಂದ ಅನಾರೋಗ್ಯದಿಂದ ಬಳಲುತ್ತಿದ್ದಾಗಲೂ ; ಸಂಜೆ ವೇಳೆ, ಮನೆಯಲ್ಲಿ ಕುಳಿತು ಎಲೆಕ್ಟ್ರಾನಿಕ್ ಶ್ರುತಿಪೆಟ್ಟಿಗೆ ಇಟ್ಟುಕೊಂಡು ಹಾಡುವುದನ್ನು ಬಿಟ್ಟಿರಲಿಲ್ಲ !

ಯಕ್ಷಗಾನದಲ್ಲಿ ಸಂಗೀತವನ್ನು ಪರಂಪರೆಗೆ ಭಂಗ ಬಾರದಂತೆ ಅಳವಡಿಸುವುದರ ಕುರಿತು ಸಾಕಷ್ಟು ಚಿಂತನೆ ಮಾಡಿದವರವರು. ಶಾಸ್ತ್ರೀಯ ಸಂಗೀತವನ್ನು ಕಲಿತರೂ ಅಲ್ಲಿ ಅವರ ಹುಡುಕಾಟ ಯಕ್ಷಗಾನಗಳಲ್ಲಿನ ಶಾಸ್ತ್ರೀಯತೆಯನ್ನು ಹುಡುಕುವುದಾಗಿತ್ತು. ಭಾಗವತಿಕೆಯಲ್ಲಿ ರಾಗದ ಖಚಿತತೆ ಬಯಸುತ್ತಿದ್ದರು. ಶ್ರುತಿಬದ್ಧವಾಗಿ ಹಾಡಿಕೊಂಡೇ ಅಭಿನಯಿಸಿ ಅರ್ಥ ಹೇಳುವುದು ಅವರಿಗೆ ಸಿದ್ಧಿಸಿತ್ತು.







ಅದಕ್ಕಾಗಿಯೇ ಅವರಿಗೆ ಎಂತಹ ಭಾಗವತ ಹಾಡಿದರೂ ಸರಿ ಬರುತ್ತಿರಲಿಲ್ಲ. ಕಡು ನಿಷ್ಠುರವಾಗಿಯೇ ನಡೆದುಕೊಳ್ಳುತ್ತಿದ್ದರು. ಮೊಟ್ಟ ಮೊದಲು ಬಡಗಿನ ಚೆಂಡೆಗೆ ಶೃತಿಯನ್ನು ಅಳವಡಿಸಿದ್ದೂ ಮಹಾಬಲರೇ !

ಶಾಸ್ತ್ರೀಯ ಸಂಗೀತ ಒಂದು ಬದ್ಧತೆಯನ್ನು, ಶಿಸ್ತನ್ನು, ಕ್ರಮವನ್ನು, ಆಚಾರವನ್ನು ಬಯಸುವ ಕಲೆ. ಆದರೆ ಯಕ್ಷಗಾನದ ಸ್ವರೂಪ ಸ್ವಚ್ಛಂದ. ಹಾಗಾಗಿ ತಮ್ಮ ಕಲಾ ಬದುಕಿನಲ್ಲಿ ಯಕ್ಷಗಾನದ ಶಾಸ್ತ್ರೀಯ ಅಂಶವನ್ನೇ ಹುಡುಕಿ ತಪ್ಪು–ಸರಿಗಳನ್ನು ಎತ್ತಿ ತೋರಿಸುತ್ತಿದ್ದರು. ವಿಶ್ವಾಮಿತ್ರ ಮೇನಕೆಯಲ್ಲಿ ಅಭಿನಯಿಸುವಾಗ ಗಂಗಾಧರ ಶಾಸ್ತ್ರಿಯವರ "ಎಲ್ಲೆಲ್ಲೂ ಸೊಬಗಿದೆ, ಸುತ್ತೆಲ್ಲ ಸೊಗಸಿದೆ" ಎನ್ನುವ ಪದ್ಯವನ್ನು ಸುಮಾರು ೧೯೫೫ ರಲ್ಲಿ ಬಳಸಿಕೊಂಡರೂ ; ಅದು ಯಕ್ಷಗಾನಕ್ಕೆ ಹೊಂದುವುದಿಲ್ಲ ಎಂದು ತಿಳಿದಾಗ ನಿರ್ದಾಕ್ಷಿಣ್ಯವಾಗಿ ಬಿಸಾಡಿದರು. ರಂಗ ಪಯಣದಲ್ಲಿ ಅನೇಕ ಪ್ರಯೋಗವನ್ನು ಮಾಡಿ ಯಕ್ಷಗಾನಕ್ಕೆ ಪೂರಕವಾದದ್ದನ್ನಷ್ಟೇ ಉಳಿಸಿಕೊಂಡವರು. ಪ್ರಯೋಗವೆಂಬುದು ವಿಕಸನವೇ ಹೊರತು ಪ್ರತ್ಯೇಕತೆಯಲ್ಲ, ಕಲಾವಿದನ ಅಭಿನಯ ಕೇವಲ ಬಣ್ಣ ಬದಲಿಸುವುದಷ್ಟೇ ಅಲ್ಲ ಎಂದು ನಂಬಿದ್ದರು. ಹಾಗಾಗಿ ಮಹಾಬಲ ಹೆಗಡೆಯವರ ಪಾತ್ರಗಳು ಶಾಸ್ತ್ರದ ಆಧಾರದಿಂದ ಸೃಜನಶೀಲವಾಗಿ ಹೊಸ ನಾಯಕತ್ವದ ಆಯಾಮಕ್ಕೆ ಕಾರಣವಾಯಿತು.

ಕಲಾವಿದನ ರಂಗ ಪಯಣದ ಅನುಭವಜನ್ಯ ಪ್ರಯೋಗಗಳೇ ಕಲೆಯ ಮೇಲಿನ ಹಿಡಿತವನ್ನು ಕಟ್ಟಿಕೊಡುತ್ತವೆ. ವರ್ತಮಾನದಿಂದ ಪೌರಾಣಿಕ ಲೋಕಕ್ಕೆ ಕರೆದೊಯ್ಯುವ, ಯಕ್ಷಲೋಕದ ವರ್ತಮಾನ ಸ್ಥಿತಿಯ ಮೇಲೆ ಬೆಳಕು ಚೆಲ್ಲುವ ಅವರ ವಾಕ್ ಸಾಮರ್ಥ್ಯ, ಕಲಾಭಿಜ್ಞತೆ, ಚಿಕಿತ್ಸಕ ದೃಷ್ಟಿ ಎಲ್ಲವೂ ಅನುಪಮ. ಜೊತೆಗೆ ಪಾತ್ರದ ವ್ಯಕ್ತಿತ್ವವನ್ನು ಸಮಕಾಲೀನ ಸಂದರ್ಭಕ್ಕೆ ಬೆಸೆಯುತ್ತಾ ; ಪ್ರೇಕ್ಷಕವರ್ಗದಲ್ಲಿ ಜಾಗೃತಿ, ಚಿಂತನೆ ತರುತ್ತಿದ್ದ ಅವರ ವಾಕ್ಪಟುತ್ವ, ಪಾತ್ರಕ್ಕೆ ತಕ್ಕುದಾದ ಕಂಠ, ಭಾವಾಭಿನಯ, ಸೂಕ್ತವಾದ ನಡೆ–ನುಡಿ ಮತ್ತು ನೃತ್ಯಾಭಿನಯ, ಲಯಬದ್ಧ ಕುಣಿತ ಅವರದ್ದು. ವಿಶಿಷ್ಟವಾದ ಚೌತಾಳರ ಕುಣಿತ ಮಹಾಬಲರದ್ದೇ. ನಾಟ್ಯಶಾಸ್ತ್ರದಲ್ಲಿ ಬರುವ ಸಾತ್ವತೀ ಮತ್ತು ಆರಭಟೀ ವೃತ್ತಿಗೆ ಮಾದರಿಯಾಗಬಲ್ಲ ಪಾತ್ರವನ್ನು ಕಟ್ಟಿಕೊಟ್ಟವರು ಮಹಾಬಲರು. ಹಾಗಾದ್ದರಿಂದಲೋ ಏನೋ, ಇವರ ಗಂಭೀರ, ವೀರ ಭಾವಗಳಂತೆ ಕರುಣಾರಸ ಅಷ್ಟೊಂದು ಪ್ರಸಿದ್ಧಿಯಲ್ಲ.

ಯಕ್ಷಗಾನದಲ್ಲಿ ವೇಷ ಮಾಡುವುದೆಂದರೆ, ಒಂದಷ್ಟು ಗಟ್ಟಿ ಮಾತಿನಿಂದ, ಚರ್ವಿತ ಚರ್ವಣ ಸೇರಿಸಿ ಮಾತು ಹೆಣೆದು, ಶಬ್ದಾಲಂಕಾರ ಬಳಸಿ ಪ್ರೇಕ್ಷಕರನ್ನು ಮೋಡಿ ಮಾಡುವುದು ಎಂದೇ ಆಗಿದೆ. ಆದರೆ ಉಪಮಾ – ರೂಪಕ ಅಲಂಕಾರಗಳಿಂದಾಗಿ ಮಹಾಬಲರದ್ದು ವಿಪುಲವಾದ ಸಾಹಿತ್ಯದ ಅಧ್ಯಯನದಿಂದ ಅರಿವು ಪಡೆದು ಸಂಸ್ಕಾರಗೊಂಡ ಭಾಷೆ. ನೇರ ತೂಕ ತಪ್ಪದ ಗತ್ತಿನ ಮಾತು. ನಾಟಕ ಕ್ಷೇತ್ರದಲ್ಲಿಯೂ ತಮ್ಮ ಸ್ತ್ರೀಪಾತ್ರಕ್ಕಾಗಿ, ಪ್ರಸಿದ್ಧಿ ಗಳಿಸಿದ್ದರು. ಹಾಗಾಗಿ ಮಾತಿನ ವ್ಯಂಗ್ಯ ವೈಶಿಷ್ಟ್ಯಕ್ಕೆ ಒಂದರ್ಥದಲ್ಲಿ ಕಾರಣವೇ ನಾಟಕ ರಂಗದ ಅನುಭವ. ರಂಗಕ್ಕೆ ಒಗ್ಗುವ ಹಾಗೆ ಪ್ರಾದೇಶಿಕ ಪದಗಳ (ಗ್ರಾಮೀಣ/ ಗಾಂವಟಿ ಶಬ್ದ) ಬಳಕೆಯೂ ಮಹಾಬಲ ಹೆಗಡೆ ಶೈಲಿ ವೈಶಿಷ್ಟ್ಯ.

ರಂಗದ ಕುರಿತಾದ ಅಧ್ಯಯನದಿಂದ ವೈಚಾರಿಕ ಸಂಪನ್ನರೆನಿಸಿದವರು ಹೆಗಡೆ. ಇವೆಲ್ಲದಕ್ಕೆ ಬೇಕಾದ ಪೂರ್ವಾಧ್ಯಯನದಲ್ಲಿ ಅವರಿಗಿದ್ದ ಆಸಕ್ತಿ, ಕಲಾಭಿಮಾನಿಗಳಿಗೆ ಹೇಗೆ ಭಾವ–ರಸ ಉಣಬಡಿಸಬಹುದೆಂಬ ಕುರಿತಾದ ಅವರ ಚಿರಂತನ ಚಿಂತನೆ ; ಯಕ್ಷಗಾನ ಕಲಾವಿದರು ಹೇಗಿರಬೇಕು ಎಂಬುದಕ್ಕೆ ಮಾದರಿ.

ಖ್ಯಾತ ವಿದ್ವಾಂಸ ದಿ| ಕು.ಶಿ. ಹರಿದಾಶಭಟ್ಟರು ತಮ್ಮ ಅಂಕಣ 'ಲೋಕಾಭಿರಾಮ'ದಲ್ಲಿ ಕಿರುತೆರೆಯಲ್ಲಿ ಪ್ರಸಾರವಾದ, ಆ ಕಾಲದಲ್ಲಿ ಇಡೀ ದೇಶವನ್ನೇ ಬೆರಗುಗೊಳಿಸಿದ ಮಹಾಭಾರತ ಸರಣಿಯ ಬಗೆಗೆ ಬರೆಯುತ್ತಾ, ಭೀಷ್ಮನ ಪಾತ್ರಧಾರಿಯ ಮುಕೇಶ್ ಖನ್ನಾನ ಕುರಿತು ಹೊಗಳುವಾಗ ಮಹಾಬಲ



ಹೆಗಡೆಯವರ ಭೀಷ್ಮನನ್ನು ಹೊರತುಪಡಿಸಿ ಎಂದು ವಿವರಿಸಿದ್ದರು.

ಮಹಾಬಲರ ಭೀಷ್ಮ ಮಾತ್ರವಲ್ಲ ; ಅವರು ನಿರ್ವಹಿಸಿ ಹೆಸರು ಪಡೆದ ದಶರಥ, ರಾವಣ, ಕಂಸ, ಕೌರವ, ಅರ್ಜುನ, ಸುಧನ್ವ, ಹಾಸ್ಯಪಾತ್ರ, ಸ್ತ್ರೀಪಾತ್ರಗಳು ..ಹೀಗೆ ಮಹಾಬಲರ ಪಾತ್ರ ಸಾಕ್ಷಾತ್ಕಾರದಲ್ಲಿ ದೈವೀಸಿದ್ಧಿಯನ್ನು ನಾಟ್ಯಧರ್ಮಿಯಲ್ಲಿ ಮಿಳಿತ ಮಾಡುವುದನ್ನು ಪ್ರೇಕ್ಷಕ ಅನುಭವಿಸಿದ್ದಾನೆ. ಒಂದರ್ಥದಲ್ಲಿ ಮಹಾಬಲರು ಯಕ್ಷಗಾನದ ಸವ್ಯಸಾಚಿ ಅಂದರೆ ಅತಿಶಯವಲ್ಲ!

"ವಿನಾ ದೈನ್ಯೇನ ಜೀವನಂ" ಬದುಕಿನುದ್ದಕ್ಕೂ ಅಳವಡಿಸಿಕೊಂಡವರು ಮಹಾಬಲ ಹೆಗಡೆ. ಮಹಾ ಸ್ವಾಭಿಮಾನಿ. ಒಂದು ಬಗೆಯ 'ಮೂಡಿ'ಯೂ ಕೂಡಾ ! ಹಣದ ವಿಷಯದಲ್ಲಿ ಒಂದು ಕಾಸು ಕಡಿಮೆ ತೆಗೆದುಕೊಂಡವರಲ್ಲ; ಒಂದು ಕಾಸು ಹೆಚ್ಚು ಕೊಟ್ಟವರಲ್ಲ. ತಮಗೆ ಬರಬೇಕಾದ್ದನ್ನು ಬಿಟ್ಟವರಲ್ಲ; ಕೊಡಬೇಕಾದ್ದನ್ನು ತಪ್ಪಿಸಿದವರಲ್ಲ. ಯಾರೆದುರೂ ಕೈ ಚಾಚಿದವರಲ್ಲ. ಮಾತು ತಪ್ಪಿದವರಲ್ಲ. ಯಾವುದನ್ನೇ ಆದರೂ ಶಿಸ್ತುಬದ್ಧವಾಗಿ ಸ್ವೀಕರಿಸುವದು ಮತ್ತು ಅಳವಡಿಸಿಕೊಳ್ಳುವದು ಅವರ ಅಭ್ಯಾಸ.



'ನನಗೆ ವ್ಯವಸ್ಥಿತವಾಗಿ ಸುಳ್ಳು ಹೇಳಿ ಕಾರ್ಯ ಸಾಧಿಸಿಕೊಳ್ಳಲು ಬರುವುದಿಲ್ಲ. ಹುಡುಗಾಟಿಕೆಗೆ, ತಮಾಷೆಗೆ ಸುಳ್ಳು ಹೇಳುವುದುಂಟು; ಉಳಿದಂತೆ ಉದ್ದೇಶಪೂರ್ವಕ ಸುಳ್ಳು ಹೇಳುವ ಅಭ್ಯಾಸ ಇಲ್ಲ' ಎಂದಿದ್ದರು. ಕಪಟ, ಕೃತ್ರಿಮ ವರ್ತನೆಗಳಿಂದ ಬಹಳ ದೂರ.

ಹೊಗಳಿಕೆಗಳನ್ನು ಬೇಡವೆನ್ನಲಿಲ್ಲ. ಹಾಗಂತ ರಚನಾತ್ಮಕವಾಗಿದ್ದರೆ, ಟೀಕೆಗೂ ಮೈಯೊಡ್ಡಲು ಹಿಂಜರಿದವರಲ್ಲ. ಆದರೆ ತಮಗೆ ಸಲ್ಲದ ಪ್ರಶಂಸೆ ಬಂದರೆ ಅಷ್ಟೇ ವಿನಯದಿಂದ ಹಿಂದಿರುಗಿಸುತ್ತಿದ್ದರು. ಜೊತೆಗೆ ತಾನು ಹೇಳಿಕೊಟ್ಟದ್ದನ್ನು ಇನ್ನೊಬ್ಬರು ಪ್ರತಿಪಾದಿಸಿದಾಗ ಕರುಬುವ ಮಂದಿಯಿರುವ ಕಾಲದಲ್ಲಿ ಮಹಾಬಲರು 'ತಮ್ಮ ಅನುಭವಗಳು ನಿಜವಾದುವಲ್ಲಾ' ಎಂದುಕೊಂಡು ಸಂಭ್ರಮಿಸುತ್ತಿದ್ದರು. ಆದರೆ ತಮ್ಮ ಅರ್ಹತೆ ಗುರುತಿಸದಿದ್ದಾಗ ಅಸಮಾಧಾನ ಹೊಂದಿದ್ದೂ ಇದೆ. ಇತ್ತೀಚೆಗೆ ಅಕ್ಟೋಬರ್ ೧೫ರಂದು ದೇರಾಜೆ ಸೀತಾರಾಮಯ್ಯ ಪ್ರಶಸ್ತಿಯನ್ನು ಕೊಡಲಾಗಿತ್ತು. ಇದು ಅವರಿಗೆ ದೊರೆತ ಕೊನೆಯ ಪ್ರಶಸ್ತಿ. ಅನಾರೋಗ್ಯದಿಂದ ಬಳಲುತ್ತಿದ್ದ ಹಿನ್ನೆಲೆಯಲ್ಲಿ ಅವರಿಗೆ ಮನೆಯಲ್ಲಿಯೇ ಪ್ರಶಸ್ತಿ ಪ್ರದಾನ ಮಾಡಲಾಗಿತ್ತು.



ಶಂಭು ಹೆಗಡೆ ತೀರಿಕೊಂಡಿದ್ದು ಇಡಗುಂಜಿ ತೇರಿನ ದಿನ ; ರಥ ಸಪ್ತಮಿಯಂದು. ಮಹಾಬಲ ಹೆಗಡೆ ಏಕಾದಶಿಯಂದು. ಶುಭ ಸಂದರ್ಭಗಳೇ.. ಆದರೆ ಅಶುಭ ವಾರ್ತೆ. ಮಹಾಬಲ ಹೆಗಡೆ, ಶಂಭು ಹೆಗಡೆ ಜೋಡಿ ಯಕ್ಷಗಾನದಲ್ಲಿನ ಅಮೃತ ಗಳಿಗೆಗಳಲ್ಲೊಂದು. ಈಗ ಕೆರೆಮನೆಯ ಜೋಡಿ ಕಲಾದಿಗಂತದಿಂದ ಮರೆಯಾಗಿದೆ. ಯಕ್ಷಗಾನದ ವೈಭವಪೂರ್ಣ ಅಧ್ಯಾಯಕ್ಕೊಂದು ತೆರೆ ಬಿದ್ದಿದೆ. ಮರೆಯಾದ ಚೇತನಕ್ಕಿದೋ ಅಕ್ಷರಾಂಜಲಿ..





# ಲಲಿತ ಲಹರಿ

**ಗಿರಿಜಾ ಕಲ್ಯಾಣವೆಂಬ ಪೌರಾಣಿಕ ಕಥಾ ವಸ್ತು ಕಾವ್ಯ-ನಾಟ್ಯ-ನೃತ್ಯ-ಜಾನಪದಾದಿಯಾಗಿ ಹಲವು ಸನ್ನಿವೇಶಗಳಿಗೆ ಅದ್ಭುತವೆನಿಸುವ ವಸ್ತು. ಮತ್ತೊಮ್ಮೆ ಈ ಲಲಿತ ಮನೋಹರವಾದ ಸೊಗದಿಂದೊಡಗೂಡಿದ 'ಗಿರಿಜಾ ಕಲ್ಯಾಣ' ವನ್ನು ತಮ್ಮ ಕಾವ್ಯ ಲಹರಿಯಲ್ಲಿ ನಿಮ್ಮ ಮುಂದಿರಿಸಿದ್ದಾರೆ ಧಾರವಾಡದಲ್ಲಿ ಆಕಾಶವಾಣಿ ಮಾಧ್ಯಮದಲ್ಲಿ ವೃತ್ತಿಯಲ್ಲಿರುವ, ಪ್ರವೃತ್ತಿಯಲ್ಲಿ ಕವಿಯೂ, ರೂಪಕ ರಚನೆಯಲ್ಲಿ ಛಂದಸ್ಸು-ಪ್ರಾಸಗಳ ಸಮಯೋಚಿತ ಬಳಕೆಯೊಂದಿಗೆ ಸೃಷ್ಟಿಶೀಲರೆನಿಸಿದ ದಿವಾಕರ ಹೆಗಡೆ.**

**ಓದಿ ಆನಂದಿಸಿ, ಕೇಳಿ ಖುಷಿಯಾಗಿ, ನಲಿದು ನಾಟ್ಯವಾಡಿ.**

**(ನೃತ್ಯ-ನಾಟ್ಯಗಳ ಕುರಿತಾಗಿ ಕಾವ್ಯ ಬರೆಯುವ, ಲಹರಿ ನುಡಿಸುವ ಸರ್ವ ಸಹೃದಯರಿಗೂ ಈ ಅಂಕಣಕ್ಕೆ ಬರೆಯುವ ಅವಕಾಶ ಮುಕ್ತವಾಗಿದೆ.)**

**ನಿರೂಪಕ :** ಲಯದಿ ಲಾಸ್ಯ ತಾ ನಲಿದು ಕುಣದ ಘನದಾಲಯ ಕೈಲಾಸ ।
ವ್ಯಯದ ನಾಟ್ಯ ಭವ ಭಯವನು ಕಳೆದಿದೆ ಈಶ್ವರ ಸಹವಾಸ ॥

ದಕ್ಷ ತನಯೆ ತಾನರಿಯದೆ ಬಂದಳು ಈಶ ರಹಿತ ಯಾಗ ।
ಶಿಕ್ಷೆಯೆನುತ ಬೆಂದಳಿದಳು ಉರಿಯಲಿ ಕುದಿದನೀಶನಾಗ ॥

ಮುಕ್ಕಣ್ಣನು ಮುಡಿಬಡಿಯೆ ಮೂಡಿದನು ವೀರಭದ್ರ ಘೋರ ।
ಸೊಕ್ಕಿದ ದಕ್ಷನ ತಲೆಯ ತರಿದು ತಾ ಮಿಕ್ಕಿ ಮೆರೆದ ವೀರ ॥

ಶಿವ ವಿರಹದ ಉರಿ ತಪದಲಿ ತಣಿಯಿತು ಭವಳಿದನುಭಾವ ।
ಕವಿದ ದೈತ್ಯ ತಾರಕನಿಗೆ ವರವಿದೆ ಶಿವ ಸಂತಾಽನದಿ ಸಾವ ॥

**ಪರ್ವತ ಯಜ :** ಪರ್ವತನ ಯಜದಲಿ ಪಾವಕನ ಮುದವೇನು ।
ಸರ್ವಜನ ಸಮ್ಮುದದಿ ಶ್ರಾವ್ಯ ಸಂಪದವೇನು ।
ಪಾರ್ವರೊಂದಾದ ನುಡಿ ವೇದ ವೈಭವವೇನು ।
ಪರ್ವಕಾಲದಿ ಪಡೆದ ದೈವ ಬೆಂಬಲವೇನು ॥
ಮಗಳು ಹುಟ್ಟಿದಳು ಸೊಗವು ಹೆಚ್ಚಿದುದು ಗಿರಿರಾಜಗೆ ತೋಷ ।
ಅಗಜೆ ಬೆಳೆದಳು ಬಗೆ ಬಗೆ ನಿಲುವು ರತಿ ತಳೆದಳೆ ವೇಷ ॥

**ಪಾರ್ವತಿಯ ಪ್ರವೇಶ :** ಬಾಲೆ ಗಿರಿಜೆಯು ಲೋಲ ಲೋಚನೆ ।
ತಾಳದಲಿ ನಡೆ ಹಂಸ ಗಮನೆಯು ।
ಲೀಲೆಯಲಿ ಕಾಲವನು ಕುಣಿಸುವ ।
ವ್ಯಾಳವೇಣಿ ॥

ನೀರ ನೀರೆ ನಾಚಿದಂತೆ ಗಿರಿಜೆ ಮಜ್ಜನ ।
ನಾರಿ ಸೀರೆಯುಟ್ಟುದೊಂದು ಬಗೆ ವಿನೂತನ।
ನೀಳ ಕೇಶಿ ಜಡೆಯ ಹೆಣೆದರೇನು ಸೊಗಸದು ।
ನೀಲವರ್ಣ ನಾಗವೇಣಿ ತೂಗಿ ತೊನೆವುದು ॥

ಕಣ್ಣ ಕಪ್ಪ ತಿದ್ದಿ ತೀಡಿ ಒಪ್ಪವಿಡುವಳೋ ।
ಚಿನ್ನದೊಡವೆ ಇಟ್ಟು ನಲಿವಳೇನು ಚೆಲುವೆಯೋ ॥
ಗಂಧ ಚೆಂದ ಚಂದನಗಳನಂದು ಪೂಸಲು ।
ಸೂಂದರಾಂಗಿ ಚೆಲುವಿದೆಲ್ಲ ಶಿವಗೆ ಮೀಸಲು ॥

-೨-

ಸೂಂದರಾಂಗಿ ಚೆಲುವಿದೆಲ್ಲ ಶಿವಗೆ ಮೀಸಲು ॥
ಮಾಲೆ ಮಾಲೆ ಕುಸುಮ ಬಾಲೆ ಹೂವ ಮುಡಿದಳು ।
ನಾಳೆ ನಾಳೆ ಎನುವ ಕಾಲ ನಿಂತು ನೋಡಲು ॥
ಮುಕುರುವಿಡಿದು ಮುಖವ ನೋಡೆ ನಾಚಿ ನಿಂತಳು ।
ಸುಖದ ಜೀವ ಸೊಗದ ಕನಸು ಹಾಡಿ ಕುಣಿದಳು ॥

ಶಿವ ವಿರಹದಿ ಗಿರಿಜಾತೆಯು ಬಳಲುತ ಗತಿವಿಡಿದಳು ಶೀಲೆ

ಜವದಲಿ ಪರ್ವತವೇರುವ ಸಾಹಸ ಹಿಮವಂತನ ಬಾಲೆ

**ಶಿವ :** ಧ್ಯಾನದಲಿ ಮರವಟ್ಟು ಮೈಮರೆತನೇ ಶಿವನು ।
ಜಾನದಲಿ ಲೋಕವನು ನೋಡದಾದನೆ ಭವನು ।
ಹಿಮದಲ್ಲಿ ಹಿಮವಾದ ದಮದಲ್ಲಿ ದೊರೆಯಾದ ।
ಶಮೆಯಲ್ಲಿ ವಿರಹವನು ಜಯಿಸಿ ಮೆರೆದ ॥

**ಪಾರ್ವತಿ :** ಬಂದು ಕಂಡಳು ಸ್ಥಾಣು ತಪವನು ।
ನಿಂದು ನೋಡುತ ಹರನ ವಿಭವವ ।
ಕುಂದಿರದ ತಾಪಸಿಯ ನೆನೆದಳು ।
ಅಂದದಿಂದ ॥

ಹೃದಯದಲಿ ಹೊತ್ತವಳು ಶಿವನ ತಾ ಸುತ್ತಿದಳು ।
ಮುದವಿರದ ಕೈಲಾಸಕೆಸವ ಸೊಗ ಬಿತ್ತಿದಳು ।
ಹದದಿ ಹರ ನೊಲವ ಬಯ ಬಯಸಿ ಮುಂದೊತ್ತಿದಳು।
ಅದನದನೆ ಹಂಬಲಿಸಿ ಹತ್ತಿರದಿ ನಿತ್ತಿಹಳು ॥

ಪರಮ ಶಿವನ ಪರಿಯಿದೇನು ಹರನು ಹೊರಗ ಕಾಣನೇನು
ಕರೆದು ನುಡಿಸೆ ಮಾತನಾಡ ಸರಿದು ನಿಲ್ಲೆ ತೆರೆದು ನೋಡ
ಕರದ ಬಳೆಯ ನಾದಕಿಲ್ಲ ಕಾಲಗೆಜ್ಜೆ ಉಲಿಯನೊಲ್ಲ
ತೆರೆಯಲಾರನಿವನು ಕಣ್ಣ ನೋಡಲಾರನೆನ್ನ ಬಣ್ಣ
ಬರಿದೆಬಂದು ಕೆಟ್ಟೆನೇನು ಹೊರಳಿ ಹೋಗಲಾರೆ ನಾನು
ಸ್ಮರನ ಭಾವ ಇವನಿಗಿಲ್ಲ ಹರನೆ ನಿನ್ನ ಒಲಿದೆನಲ್ಲ
ಸುರರು ನೋಡಿರೆನ್ನ ಕಷ್ಟ ಸುಡುವ ಕಾಮನೇನು ದುಷ್ಟ.

**ಕಾಮ, ರತಿ :** ಹಿಮವಂತನ ಪುತ್ರಿ । ನಾನೇ । ಕಾಮನು ಇವಳು ರತಿ ॥
ಸುಮನಸರಸನು ಕಳುಹಿದನೆಮ್ಮನು ।





ನಿಮಗನುಕೂಲದ ಕಾರ್ಯವನೆಸಗಲು ॥

**ಕಾಮ :** ಶಿವನನು ಭವ ಕಾನಿಳಿಸುವೆನು ।
ಪಂಚಬಾಣ ಸಂಭ್ರಮಿಸುವೆನು ।
ತವಕದೆಸುಗೆಯಲಿ ಕೈಲಾಸದಿನಾ ।
ನವ ಪಲ್ಲವ ಸೌಂದರ್ಯವ ಕಾಣಿಸಿ ॥

-೩-

**ಗೌರಿ :** ಕಾಮನಬಿಲ್ಲಿಗೆ ಬಣ್ಣಗಳೇಳಿವೆ ।
ತಾಮನ ಮಾಡಿದ ಮಂದಾನಿಲನು ।
ಈ ಮರ ಆ ಮರ ಪುಷ್ಪಗಳೈಸಿರಿ ।
ಸೀಮೆಯ ತುಂಬಿದ ಹೂಗಂಧ ಪರಿ ॥

**ಗೌರಿ ಮತ್ತು ರತಿ :** ಮನಸಿಜನೆಸುಗೆಯ ಹದವೇನು ।
ಮಸಣದಿ ಮಲ್ಲಿಗೆ ಮುದವೇನು ।
ಹೊಸದಾಯಿತು ಕೈಲಾಸದ ಪರಿಸರ ।
ಬೆಸೆವಂಬಿನ ಪರಿ ಸಾಸಿರ ಸಾಸಿರ ।
ಕುಸುಮ ಶರನ ಹತಿ ಭಸಿತಾಂಗಗೆ ಖತಿ ।
ಎಸುಗೆಯೊಳಾರತಿ ಶಿವನ ಕೆಣಕಿತತಿ ।
ಹಸಿವೆಯ ಹಂಬಲ ತಪೋನಿರತ ಮತಿ ।
ಜಸವಿದು ಜೀವಕೆ ಮಿಸುಕಿದ ಪಶುಪತಿ ।

**ತಾಂಡವ :** ಫಡ ಫಡ ಬಡ ಬಡ ಗಡ ಗಡ ಗಡ ಗಡ
ಧಡ ದಢ ಎನ್ನುವ ಭೈರವ ತಾಂಡವ
ಸೆಡಿವಿನ ನಡೆ ಅಡಿ ಅಡಿಯಲಿ ಮೆರೆದಿದೆ
ಜಡೆ ಮುಡಿಯಲಿ ರೋಷವೆ ಹೆಡೆಯಾಡಿದೆ
ಹಿಡಿದ ಡಮರು ಗುಡು ಗುಡು ಗುಡು ಗುಡುಗಿದೆ
ಬಿಡೆನೆನ್ನುವ ಮೃಡ ಜಗ ತಾ ಬೆದರಿದೆ
ಸಿಡಿಲು ಬಡಿದು ಮಿಂಚೊಡದಾಘಾತಕೆ
ಕಡಲ ಕಡೆದ ಬಡಬಾಗ್ನಿಯ ಭೀತಕೆ
ಸುಡುವೆ ಜಗವನೆಂದಾರ್ಭಟಿಸುತ್ತಿರೆ
ಒಡೆಯಿತು ಹಣೆ ಮೂಡಿತು ವಾರಕ್ಷಿಯು

ಉಕ್ಕಿದ ಕೋಪಕೆ ಸಿಕ್ಕಿದ ಕಾಮನ ।
ಮುಕ್ಕಿದ ಮುಕ್ಕಣ್ಣ ॥
ಮಿಕ್ಕಿದ ತಪ ಸುಮಶರನನು ನೆಕ್ಕಿತು ।
ಬಿಕ್ಕಿದ ರತಿರನ್ನ ॥

ಸುಟ್ಟವನ ಬೂದಿಯನು ಥಟ್ಟನೇ ಹಣೆಗಿರಿಸಿ ।
ದಿಟ್ಟಿಸದೆ ಪಾರ್ವತಿಯ ಮತ್ತೆ ತಪಕಿಳಿದ ॥

(....ಮುಂದುವರಿಯುವುದು)



## ಹಸ್ತ ಮಯೂರಿ

# ಸಿಂಹಮುಖ ಹಸ್ತ

**ಲಕ್ಷಣ : ಮಧ್ಯ ಮತ್ತು ತೋರುಬೆರಳನ್ನು ಬಾಗಿಸಿ ಅವುಗಳ ತುದಿಯನ್ನು ಹೆಬ್ಬೆರಳೊಂದಿಗೆ ಸೇರಿಸಿ, ಕಿರು ಮತ್ತು ತೋರುಬೆರಳನ್ನು ನೀಡಿದರೆ ಸಿಂಹಮುಖ ಹಸ್ತ. ಸಿಂಹಮುಖವೆಂದರೆ ಸಿಂಹದ ಮುಖ ಎಂಬ ಅರ್ಥ. ನಾಟ್ಯಶಾಸ್ತ್ರದಲ್ಲಿ ಈ ಹೆಸರಿನ ಹಸ್ತವಿಲ್ಲ. ಹಸ್ತಮುಕ್ತಾವಳಿಯಲ್ಲಿ ಇದನ್ನು ಸಿಂಹಾಸ್ಯ ಎನ್ನಲಾಗಿದ್ದು ಲಕ್ಷಣವು ಹೆಬ್ಬೆರಳು ಮತ್ತು ಕಿರುಬೆರಳನ್ನು ಪ್ರತ್ಯೇಕವಾಗಿ ಹಿಡಿದು ಉಳಿದ ಬೆರಳುಗಳನ್ನು ಬಗ್ಗಿಸಬೇಕೆಂದು ಸೂಚಿಸಿದೆ. ಇದು ಮಿಶ್ರ ಹಸ್ತದ ಗುಂಪಿಗೆ ಸೇರುತ್ತದೆ.**

**ವಿನಿಯೋಗ :** ಹವಳ-ಮುತ್ತನ್ನು ತೋರುವುದು, ಸುವಾಸನೆ, ಮುಂಗುರುಳು ತಿದ್ದುವಿಕೆ, ಕೇಳುವುದು, ಬಿಂದು, ಮೋಕ್ಷಾಭಿಲಾಷೆ, ಹೋಮ ಮಾಡುವುದು, ಮೊಲ, ಆನೆ, ದರ್ಭೆಯನ್ನು ಬಿಡಿಸುವುದು, ಕಮಲದ ಹಾರ, ಸಿಂಹದ ಮುಖ, ಔಷಧಿಯನ್ನು ಪರೀಕ್ಷಿಸುವುದು.

**ಇತರೇ ವಿನಿಯೋಗ :** ಸಿಂಹಾಸನ, ಪಲ್ಲಕ್ಕಿ, ಮಂಚ, ಆನೆಯ ದಂತ, ಕುಚದಿಂದ ಲೇಪಿಸುವುದು, ಮತ್ತೆ ಮತ್ತೆ ನೋಡುವುದು, ಎತ್ತು, ಬಾಣ, ಸಾಯುಜ್ಯ, ಅಕ್ಷತೆಗಳನ್ನು ಕೊಡುವುದು, ಉದ್ದನೆಯ ಹಾರವನ್ನು ಸರಿಪಡಿಸುವುದು ಮತ್ತು ಧರಿಸುವುದು, ಹಸನ್ಮುಖ, ಭಾವೋತ್ಕರ್ಷ, ಉಜ್ವುವಂತಹ ಭಾವ, ಆಲಿಸುವುದು, ಸ್ಮಿತವದನ, ಸಿಂಹ, ನಾಯಿ, ನಾಯಿಯ ತೋಳು, ಹುಲಿಯ ಮುಖ, ಮಗುವಿಗೆ ತಿನ್ನಿಸಲಿರುವ ಗಂಜಿ ಮುಂತಾದ ತಿನಿಸುಗಳು, ಕರಡಿಯ ಮುಖ, ಕರಡಿ, ಮೊಸಳೆ, ಹೆದರಿದವನು ಇತ್ಯಾದಿ.

**ಸಂಕರ ಹಸ್ತ** ವಿಭಾಗದಲ್ಲಿ ಸಿಂಹಮುಖ ಹಸ್ತವನ್ನು ಅಡ್ಡಲಾಗಿ ಹಿಡಿದರೆ ಕಪ್ಪು ಅಥವಾ ಶ್ಯಾಮಲ ವರ್ಣ ಎಂದೂ ಅರ್ಥ. **ನಾನಾರ್ಥ ಹಸ್ತ** ವಿಭಾಗದಲ್ಲಿ ಅಲಪದ್ಮ ಮತ್ತು ಸಿಂಹಮುಖ ಈ ಎರಡೂ ಹಸ್ತಗಳನ್ನು ಕರ್ಣ ಪ್ರದೇಶದಲ್ಲಿ ಚಾಲಿಸಿದರೆ ಶರದೃತುವೆಂದು ಅರ್ಥ.

ಚಾರಿಗಳಲ್ಲಿ, ಹರಿಣಪ್ಲುತಕ ಕರಣದಲ್ಲಿ ಇದರ ಬಳಕೆಯಿದೆ. ನಟರಾಜ, ಈಶಾನ, ನೃಸಿಂಹ ಹಸ್ತಗಳಲ್ಲೂ ; ಗಾಢ ಹಸಿರು, ಕೃಷ್ಣಾನದಿ, ಕೃಷ್ಣವೇಣಿ, ಅರ್ಜುನವೃಕ್ಷಗಳ ಸೂಚನೆಗೂ ಸಿಂಹಮುಖದ ಬಳಕೆಯಿದೆ. ಸಿಂಹಮುಖದ ಹೆಬ್ಬೆರಳನ್ನು ಅತ್ತಿತ್ತ ಅಲ್ಲಾಡಿಸುವುದು ತಿಕ್ತ (ಒಗರು) ಎಂದು ಸೂಚಿಸಿದರೆ ; **ಯಕ್ಷಗಾನ**ದಲ್ಲಿ ಜಿಂಕೆ, ಆನೆ, ಸಾಧು ಪ್ರಾಣಿಗಳು, ಸಂಪತ್ತು, ಮುಂತಾದ ವಿವರಣೆ ಕೊಡಲು ಬಳಸುತ್ತಾರೆ.

**ನಿತ್ಯಜೀವನ**ದಲ್ಲಿ ಈ ಹಸ್ತವನ್ನು ಚಿಟಿಕೆ ಹೊಡೆಯಲು, ಕುಂಕುಮದ ಬೊಟ್ಟಿಡಲು,





ಪವಿತ್ರವಾದ ವಸ್ತುಗಳನ್ನು ಹಿಡಿಯಲು, ವಸ್ತುವಿನ ನಯವನ್ನು ಪರೀಕ್ಷಿಸಲು ಇತ್ಯಾದಿ ಬಳಸುತ್ತಾರೆ.

ಸಿಂಹಮುಖದಲ್ಲಿನ ಹೆಬ್ಬೆರಳನ್ನು ಸ್ವಸ್ಥಾನಕ್ಕೆ ತಂದು ಕೊಂಡರೆ ಅದು **ಭದ್ರಹಸ್ತ**ವೆನಿಸುತ್ತದೆ. ಭದ್ರ ಎಂದರೆ ಕ್ಷೇಮ ಎಂದರ್ಥ. ಬಾಲರಾಮಭರತದಲ್ಲಿ ಉಲ್ಲೇಖಿತ.

**ವಿನಿಯೋಗ :** ಹೃದಯ ಮತ್ತು ಹಣೆಯಲ್ಲಿ ಚಂದ್ರನನ್ನು ಧರಿಸುವುದು, ಸಂವಾದ, ಸಂಶಯ, ತರ್ಕ, ಪ್ರೋಕ್ಷಣೆ, ದ್ವಾರಪಾಲಕರ ಸೂಚನೆ.

ಸಿಂಹಮುಖ ಹಸ್ತದ ತೋರು ಮತ್ತು ಕಿರು ಬೆರಳನ್ನು ಬಾಗಿಸುವುದು ಅಥವಾ ತೋರು ಮತ್ತು ಕಿರು ಬೆರಳುಗಳನ್ನು ಕ್ರಮವಾಗಿ ಉಂಗುರ ಮತ್ತು ಮಧ್ಯ ಬೆರಳುಗಳ ಹಿಂದೆಯಿರಿಸುವುದನ್ನು **ಅಜಮುಖ ಹಸ್ತ**ವೆನ್ನಲಾಗಿದೆ. ಇದು ಭರತಾರ್ಣವದಲ್ಲಿ ಉಲ್ಲೇಖಿತ.

**ವಿನಿಯೋಗ :** ಆಡಿನ ಮುಖ, ಕೊಂಬುಗಳಿಲ್ಲದ ಪ್ರಾಣಿಗಳ ಮುಖ, ಮಲ್ಲಯುದ್ಧ, ಆನೆಯ ಕುಂಭಸ್ಥಳ, ಯುದ್ಧ, ವಿದೇಶಾಂಗ ನೀತಿ.

ಎರಡು ಕೈಯ್ಯಲ್ಲೂ ಮಧ್ಯ ಮತ್ತು ಉಂಗುರ ಬೆರಳನ್ನು ಅಂಗೈಯೊಳಗೆ ಮಡಚಿ, ಹೆಬ್ಬೆರಳನ್ನು ಅದರ ಮೇಲಿಟ್ಟು, ಉಳಿದ ಬೆರಳನ್ನು ಉದ್ದಕ್ಕೆ ಚಾಚುವುದನ್ನು **ತಳ-ಸಿಂಹಮುಖಹಸ್ತ** ಎನ್ನುತ್ತಾರೆ. **ವಿನಿಯೋಗ :** ಎತ್ತು.

**ಕಥಕಳಿಯಲ್ಲಿ ಮುಕುರ, ಒಡಿಸ್ಸಿಯಲ್ಲಿ ಗೋಮುಖ, ಮಣಿಪುರಿಯಲ್ಲಿ ಮೃಗಶೀರ್ಷ**ವೆನ್ನುತ್ತಾರೆ. ಕಥಕಳಿಯಲ್ಲಿ **ಮುಕುರ** ಹಸ್ತದ ಲಕ್ಷಣ ; ಕಿರು ಮತ್ತು ತೋರು ಬೆರಳನ್ನು ಸ್ವಲ್ಪವೇ ಬಗ್ಗಿಸಿ, ಮಧ್ಯ ಮತ್ತು ಉಂಗುರ ಬೆರಳನ್ನು ಹೆಬ್ಬೆರಳಿನ ತುದಿಗೆ ಒಳಬಗ್ಗಿ ಸ್ಪರ್ಶಿಸುವಂತೆ ಮಾಡುವುದು.

**ವಿನಿಯೋಗ :** ಗಂಡುಹಂದಿಯ ಕೋಡು, ವಿರಹ, ಪಾದದ ಕೀಲು, ಸೊಂಟ, ವೇದ, ಸೋದರ, ಅಡಿಪಾಯ, ಪಿಶಾಚ, ವೇಗ, ಕವಚ, ದಪ್ಪ, ಅನಿಷ್ಟ, ಕಪ್ಪು ಜೀರುಂಡೆ, ಕಿರಣ, ಉತ್ತಮ, ಬಳೆ. ಕಂಕಣ, ನಿಷೇಧ, ನಿರಾಕರಣ, ಭುಜದ ಆಭರಣ.

**ಕಾಳಿಕಾ ಪುರಾಣವೂ ಸಿಂಹಮುಖವನ್ನು ಉಲ್ಲೇಖಿಸಿದ್ದು ; ಮೃಗಮುದ್ರೆ ಎಂದು ಆಗಮವೇದ ಕರೆದಿದೆ. ಆದರೆ ಮಧ್ಯ ಉಂಗುರ ಬೆರಳುಗಳ ಮಧ್ಯ ಭಾಗಕ್ಕೆ ಹೆಬ್ಬೆರಳನ್ನು ಸ್ಪರ್ಶಿಸುವುದು ಕ್ರಮ. ಧಾರ್ಮಿಕ ಆಚರಣೆಗಳಲ್ಲಿ ಬಳಸುವ ಮುದ್ರೆಗಳ ಪೈಕಿ ಹೆಬ್ಬೆರಳಿನೊಂದಿಗೆ ಮಧ್ಯ ಮತ್ತು ಉಂಗುರ ಬೆರಳನ್ನು ಸೇರಿಸುವುದು ಹೋಮ (ಸೂಕರ) ಮುದ್ರಾ ಎನಿಸಿಕೊಳ್ಳುತ್ತದೆ. ಯೋಗಶಾಸ್ತ್ರದ ಮುದ್ರಾ ವಿಜ್ಞಾನವು ಅಂಗೈ ಮೇಲ್ಮುಖವಾಗಿರಿಸಿ ಹೆಬ್ಬೆರಳು, ಉಂಗುರ ಬೆರಳು ಮತ್ತು ಮಧ್ಯ ಬೆರಳ ತುದಿಗಳನ್ನು ಹಿಡಿಯುವ ಸಿಂಹಮುಖವನ್ನು ಅಪಾನಮುದ್ರೆ ಎಂದಿದೆ. ಇದು ಬೆವರು-ಮಲ-ಮೂತ್ರ ಮುಂತಾದ ದೇಹದ ಕಶ್ಮಲ ವಿಸರ್ಜನೆಯಸಂಬಂಧಿ ತೊಂದರೆಯನ್ನು ನಿವಾರಿಸಿ ಮೂತ್ರಪಿಂಡಗಳ ಸಮರ್ಥ ನಿರ್ವಹಣೆಗೆ, ಸುಲಭ ಪ್ರಸವಕ್ಕೆ, ಉದರವಾಯುಶೂಲೆ, ಮೂಲವ್ಯಾಧಿ, ಅಪಚನ-ಅತಿ ಬೆವರುವಿಕೆ-ಕೈಕಾಲು ಎದೆ ಹೊಟ್ಟೆ ಉರಿ- ಬಾಯಿ-ಮೂಗು-ಕಿವಿ-ವಸಡು-ಹಲ್ಲಿನ ತೊಂದರೆಗಳ ನಿವಾರಣೆಗೆ, ವಾಕರಿಕೆ-ಬಿಕ್ಕಳಿಕೆ-ಮಧುಮೇಹದ ಶಮನಕ್ಕೆ, ಹೃದಯ ಸಂವರ್ಧನೆಗೆ, ಶಾಂತಿ-ಸಾತ್ವಿಕ-ಸದ್ಭಾವನೆಗಳ ಉದ್ದೀಪನೆಗೆ ಸಹಕಾರಿ.**

# ದೀವಟಿಗೆ 1

## Dance Jatre : An Artistic Hub for Art Lovers

**When many song and dance together at the same time, it is not just Sound or sDance, it is Divinity…**

Yes.., one of the better examples which we can quote in this concern is - **Dancejathre….**Infact this is India's first dance fair. It is a fair network zone and much more which is aimed at broadening the horizons of dance to bridge the gap between the arts and the common man. So Jatre contributing a lively festival platform which involves the public to preserve dance traditions and help transcend the eternal art forms.

It was initiated last year by Vyjayanthi Kashi, artistic director of Shambhavi School of Dance, Bangalore. Grand success of the previous year Dance Jatre has illuminated the enthusiasm and standards which was created an excitement to earn the knowledge of various perspectives. Now this Dancejathre- An artistic hub for dance professionals and for the art spectators is coming again with new outlook… on **19th and 20th December.**

Jatre…, name itself signifies the vastness and variety of works and needs ! Though it possess the characteristics of car fest which are annual festivals held at different places to herald the glory of the Gods of the temples or any 'Santhe' ; But it doesn't mean same as its word meaning conveyes. So Jathre means in English"? No! You can't translate. Because they are intertwined with our long and divine culture which dates back by many centuries.

Jatre is derived from the Sanskrit word "Yatra" — journey. In this long journey towards eternal bliss; different kinds of charachter, variety of thoughts which will merge with one another to find unity and 'greater common good'. Ultimate benefits have to be drawn based upon our sight and insight! Hence, Jatre is a not only a place for enjoyment or simple fest to get refreshments but also enhance Cross -cultural communication which extend the horizon of minds and tastes. Infact it is a way to have 'edutainment'.

Obviously Dance Jatre is having the characters of all these. Program of lectures, demonstrations, discussions, workshops, interactive and open sessions, competitions and much more.. And even you can sell or purchase or exhibit your latest dance products and promote marketing! That is why it is a special occasion and opportunity to present their work live on stage.

It is like a get together of more than 3000 visitors of different sections, such as companies, choreographers, dance schools, dance teachers, colleges, dance academies, dance educators, dance scholars, journalists, dance critics, dancers, parents, presenters, cultural institutions agencies, directors of theatres and festivals, technicians, costume designers, light designers, set designers, cultural institutions and encouraging audience

The event is scheduled on Saturday and Sunday, amidst the greenery of Freedom Park in the heart of the city of BENGALURU. ■





# 'ನೃತ್ಯ- ಅಂದು, ಇಂದು, ಮುಂದು'

ನಾಟ್ಯಾಚಾರ್ಯ ಕೆ. ಮುರಳೀಧರ ರಾವ್

**ಕ**ಲೆಗಾಗಿ ಸಂಘ ಸ್ಥಾಪನೆ ! ಹತ್ತು ಜನರ ಒಕ್ಕೂಟ ಅದು. ಕೀರ್ತಿ–ಹಣ ಸುಲಭವಾಗಿ ದೊರೆಯುತ್ತದೆ. ಅದು ಕಲೆಯ ಒಳಿತಿಗಾಗಿಯೋ ಅಥವಾ ಸ್ವಂತ ಪ್ರಯೋಜನಕ್ಕಾಗಿಯೋ?

ಇಂದು ಪರೀಕ್ಷೆ, ಪಠ್ಯಪುಸ್ತಕಗಳು, ಅದರಲ್ಲಿರಬೇಕಾದ ವಿಷಯಗಳು– ಇವೆಲ್ಲಾ ನಮ್ಮ ಸ್ವಂತ ಪ್ರಯೋಜನಕ್ಕಾಗಿ ಇವೆ; ಕಲೆಗಾಗಿ ಅಲ್ಲ. ಪಠ್ಯಪುಸ್ತಕದಲ್ಲಿರುವುದನ್ನೇ ಹೇಳಿದರೆ ನೂರಕ್ಕೆ ನೂರು ಅಂಕ ಗಳಿಸಬಹುದು ! ಇದರಿಂದ ನಮ್ಮ ಮನಸ್ಸಿಗೆ, ದೇಹಕ್ಕೇನು ಲಾಭವಾಯಿತು, ಯಾವ ರೀತಿಯಲ್ಲಿ ಜನಮನ್ನಣೆ ಗಳಿಸುತ್ತೇವೆ– ಎಂಬ ವಿಚಾರಗಳು ಆ ಸಂಘ ಸಂಸ್ಥೆಗಳಲ್ಲಿಲ್ಲ.

ಭರತನಾಟ್ಯ ಆದಿಯಾಗಿ ನೃತ್ಯ ಕಲೆಗಳನ್ನು ಬರಿಯ ಹೆಸರು ಅಥವಾ ವಿಧಿನಿಯಮವೆಂದು ಹೇಳುವ ಬದಲಿಗೆ, ಅದನ್ನು ಕೂಲಂಕಷವಾಗಿ ತಿಳಿಯುವುದು ಉತ್ತಮ. ನಾಟ್ಯದ ವಿಚಾರ ತಿಳಿದವರು, ಗುರುಗಳು, ನಾಟ್ಯ ನಡೆಸುವವರು ಹಾಗೂ ಪ್ರದರ್ಶಿಸುವವರು ಒಟ್ಟಾಗಿ ಸೇರಿ; ಉದ್ದೇಶ ಇತ್ಯಾದಿಗಳನ್ನು ಚರ್ಚಿಸಿ, ನಾಟ್ಯದ ರೀತಿನೀತಿಗಳನ್ನು ಒಂದು ನಿಯಮದಲ್ಲಿ ತರುವುದು ಮುಖ್ಯ. ಈ ಸಂದರ್ಭ ಮತ್ತು ಯೋಚನೆ ನಾಟ್ಯ ಪ್ರವರ್ತಕರಿಗೂ, ವಿಮರ್ಶಕರಿಗೂ ಒಂದು ಉತ್ತಮ ನಿದರ್ಶನವಾಗಬಹುದು.

ಭರತನಾಟ್ಯಕಲೆ– ಎಂಬುದು (೧೯೩೦ರಲ್ಲಿ ಚೆನ್ನೈನ ಸಂಗೀತ ಅಕಾಡೆಮಿ ಕಂಡ) ದಾಸೀ ಆಟ್ಟಂ, ಸಾದಿರ್, ಕೂತ್ತು, ಕರ್ನಾಟಕಂ ಎಂಬ ಹೆಸರು ಪಡೆದಿತ್ತು. ದಕ್ಷಿಣ ಭಾರತದ ತಮಿಳುನಾಡಿನಲ್ಲಿ ಉದಿಸಿದ ಈ ಕಲೆ ಮುಂದೆ ದೇಶದ ಮೂಲೆಮೂಲೆಗೂ ಹಬ್ಬಿ, ಭಾರತದ ಅತ್ಯಮೂಲ್ಯ ಕಲೆಯೆಂಬ ಪ್ರಚಾರ ಹೊಂದಿತು. ತಂಜಾವೂರು ಚತುಷ್ಟಯರಿಂದ ರೂಪುಗೊಂಡ ಈ ಕಲೆ ಮುಂದಿನ ಕೆಲ ವಿದ್ವಾಂಸರಿಂದ ಉತ್ತಮ ವ್ಯವಸ್ಥಿತ ರೂಪ ಪಡೆಯಿತು. ಇದರ ನಾಟ್ಯಾಂಶಗಳಿಗೆ 'ಮಾರ್ಗ' ಎಂಬ ಹೆಸರಿದೆ. ಇದೇ ಮಾರ್ಗದಲ್ಲಿ ಭಾವಪ್ರೇರಣೆ, ಭಾವಸ್ಫುರಣೆ ಹಾಗೂ ಭಾವಗರ್ಭಿತವೆಂಬ ಧ್ವನಿಪೂರ್ಣ ವಸ್ತು ಇರಲೇಬೇಕು. ಅದಕ್ಕೆ ಮಾರ್ಗದರ್ಶಕವಾಗಿ ಅನೇಕ ವಿದ್ವಾಂಸರೆಲ್ಲಾ ಸೇರಿ ಅದಕ್ಕೆ ಹೊಂದುವ ಸಂಗೀತ, ಪದಗಳು, ಕೀರ್ತನೆ, ಶ್ಲೋಕ, ಸಾಹಿತ್ಯಗಳನ್ನು ರಚಿಸಿ ನಾಟ್ಯಕ್ಕೆ ಅಪರಿಮಿತ ಹಿರಿಮೆ ತಂದುಕೊಟ್ಟಿದ್ದಾರೆ.



ನಾಟ್ಯದಲ್ಲಿ ಸಂಗೀತ ಮುಖ್ಯ. ನಾಟ್ಯದ ನಡೆಯಲ್ಲಿ ಸಂಗೀತದ ವಿವಿಧಾಂಶಗಳನ್ನು ಕಾಣುತ್ತಿದ್ದೇವೆ. ಹಿಂದಿನ ಶಾಸ್ತ್ರಗಳಲ್ಲಿ ಸಂಗೀತದ

ಸಾಮರಸ್ಯ ಮತ್ತು ಕಲಿಯುವಿಕೆ ನಾಟ್ಯದಷ್ಟೇ ಮೂಲವೆಂದು ಪರಿಗಣಿಸಲಾಗುತ್ತಿತ್ತು. ಅಭಿನಯದಲ್ಲಿ ರಾಗದ ಮೂಲನಡೆಗಳಿಗೆ ಅನುಸಾರವಾಗಿ ಗಮಕಗಳು, ಶ್ರುತಿಗಳು, ನೆರವಲು–ಸ್ವರಪ್ರಸ್ತಾರ ಕ್ರಮಗಳೂ ಅವಿನಾಸಂಬಂಧವಾಗಿ ಸಾಗುತ್ತದೆ. ಸಾಹಿತ್ಯವು ಸಮೀಪದಲ್ಲಿ ಚಲಿಸುತ್ತಾ ನೃತ್ಯಭಾವಕ್ಕೆ ಆಧಾರವಾಗಿರುತ್ತದೆ. ಹಾಗಾಗಿ ಸಂಗೀತವು ನರ್ತನದಿಂದ ಬೇರಾಗಿಲ್ಲ; ಬದಲಾಗಿ ಜತೆಯಲ್ಲೇ ಸಾಗುವ ವಿಶೇಷಸ್ಥಾನ ಹೊಂದಿದೆ. ಇದನ್ನೇ 'ವಾಚಿಕ'ವೆಂದು ಕರೆಯುತ್ತಾರೆ.

ನಾಟ್ಯಕಲೆಯಲ್ಲಿ ಇತ್ತೀಚೆಗೆ ಸ್ವತಂತ್ರ ಕಲ್ಪನಾಶಕ್ತಿ ಇಲ್ಲದಿರಲು ಕಾರಣ ; ನರ್ತಕರಿಗೆ ಸಂಗೀತದ ಲಕ್ಷಣಗಳೇ ತಿಳಿಯದಿರುವುದು. ನೃತ್ಯಕ್ಕೆ ಅಗತ್ಯವಾದ ಹಾಡುಗಳು ಅಥವಾ ವಸ್ತುಗಳಿಗೆ ಬಾಯಿಪಾಠ ಮಾಡುವುದಲ್ಲದೆ, ಸಂಗೀತದ ಒಳಹೊಗುವ ಸಾಹಸವೇ ಅವರಲ್ಲಿಲ್ಲ. ಸಂಗೀತದ ಜೊತೆಗೆ ಅದರೊಡನಿರುವ ತಾಳ–ಲಯಗಳು, ಅದರಲ್ಲಿ ಅಡಕವಾಗಿರುವ ಅಮೂಲ್ಯ ಹೃದಯಸ್ಪರ್ಶಿ ಸ್ವರಗುಣ ಹಾಗೂ ಆಯಾ ರಾಗಕ್ಕೆ ಒದಗುವ ಕ್ಲಪ್ತ ಸಾಮರ್ಥ್ಯವೆಲ್ಲ ನಮ್ಮಲ್ಲಿನ ಸುಪ್ತವಾದ ಭಾವನೆಗಳನ್ನು ಹೊಡೆದೆಬ್ಬಿಸುತ್ತದೆ; ಹಾಗೂ ಅಭಿನಯಕ್ಕೆ ಸೂಕ್ಷ್ಮತೆಯನ್ನು ನೀಡುತ್ತದೆ. ಇದರಿಂದ ನರ್ತಕಿಯು ತನ್ನ ಅಭಿನಯ– ನಡೆಗಳನ್ನು ಒಂದು ಸುಲಲಿತ ಸ್ಥಿತಿಗೆ ತರುವುದಲ್ಲದೆ; ನಡುನಡುವೆ ಸಾಗರದ ತರಂಗೋಪಾದಿಯಂತೆ ಸ್ಪರ್ಶಸುಖವನ್ನು ನೀಡುತ್ತದೆ.

ಹಾಡುಗಳ ತಿಳಿವಳಿಕೆ ಮತ್ತು ಕಾವ್ಯಗಳ ಅಂತಃಸತ್ವ, ಪ್ರತಿಮಾಶಿಲ್ಪ, ಸ್ಥಳಪುರಾಣ, ಇತಿಹಾಸಗಳೆಲ್ಲ ಈ ಕಲೆಗೆ ನೆರವು ನೀಡುವಂತಹವು. ಭಾವಗಳು ಆವೇಶಭರಿತವಾಗಿದ್ದರೆ ರಸವು ಅಮೂಲ್ಯತೆಯನ್ನು ಹೊಂದುತ್ತದೆ.

## ಲಲಿತ ಲಹರಿ

**ನರ್ತನ**

**ತನುಮನಗಳ**
**ಬಳುಕಿನ ಜೊತೆ**
**ಹಾವಭಾವಗಳ**
**ಸಮ್ಮಿಲನ**

– **ವಿನುತಾ .ಡಿ.**
ದ್ವಿತೀಯ ಪತ್ರಿಕೋದ್ಯಮ,
ವಿವೇಕಾನಂದ ಕಾಲೇಜು, ಪುತ್ತೂರು.





## ರಂಗ-ಭ್ರಮರಿ

# ಮುರಳೀ ರವಳೀ...

● ಮಹೇಶ್ ಎಳ್ಯಡ್ಕ

**(ಹವ್ಯಕ ಭಾಷೆ ಯಾರಿಗೆ ತಾನೇ ಗೊತ್ತಿಲ್ಲ. ಅದು ಕೇವಲ ಸೀಮಿತ ವರ್ಗದ ಭಾಷೆಯಾಗಿ, ಕನ್ನಡದ ಉಪಭಾಷೆಯಾಗಿ ಮಾತ್ರ ಉಳಿಯದೆ ; ತನ್ನ ಭಾಷೆಯೊಳಗೂ ಹತ್ತು ಹಲವು ಸ್ತರದ ವೈವಿಧ್ಯತೆಗಳನ್ನು ಚಾಚಿಗೊಂಡ ದಕ್ಷಿಣ ಮತ್ತು ಉತ್ತರ ಕನ್ನಡದಲ್ಲಿ ಹೆಚ್ಚಾಗಿ ಚಾಲ್ತಿಯಲ್ಲಿರುವ ಭಾಷೆ. ಬಹುಷಃ ಪ್ರತಿಯೋರ್ವ ಯಕ್ಷಗಾನ ಕಲಾವಿದನಿಗೂ ಈ ಭಾಷೆ ಮೊದಲಿನಿಂದಲೂ ಬಹಳ ಆಪ್ತ. 'ಒಪ್ಪಣ್ಣ'ನೆಂಬ (www.oppanna.blogspot.com) ಕಾವ್ಯನಾಮದಲ್ಲಿ ಬರೆಯುವ ; ವಿಶಿಷ್ಟ ಬರೆವಣಿಗೆಯ ಶೈಲಿಯುಳ್ಳ ಮಹೇಶ್ ಎಳ್ಯಡ್ಕ ಅವರ ಹವ್ಯಕ ಭಾಷಾ ಸೊಗಡಿನ; ಸಂಗೀತದ ಕುರಿತಾದ ಲೇಖನ ಈ ಬಾರಿ ನಿಮ್ಮ ಓದಿಗೆ. ಸಾಮಾನ್ಯ ವ್ಯಕ್ತಿಯೊಬ್ಬನು ತನ್ನ ವ್ಯಾಪ್ತಿ–ನೆಲೆಯಲ್ಲಿಯೂ ಸಂಗೀತ–ನೃತ್ಯವನ್ನು ಯಾವ್ಯಾವ ಆಯಾಮಗಳಲ್ಲಿ ನೋಡಬಹುದೆಂಬುದಕ್ಕೆ ಒಂದು ಪುಟ್ಟ ನಿದರ್ಶನವಿದು. ಅಂದಹಾಗೆ ಓದುಗರ ವೈವಿಧ್ಯ ಓದುವಿಕೆಗೆ ಬೇಕಾಗಿ ಮಾಡುತ್ತಿರುವ ನೂಪುರ ಭ್ರಮರಿಯ ವಿಶಿಷ್ಟ ಪ್ರಯೋಗಗಳಲ್ಲಿ ಇದೂ ಒಂದು. ಮುಂದಿನ ದಿನಗಳಲ್ಲಿ ತುಳು, ಕನ್ನಡದ ಉಪಭಾಷೆಗಳಾದಿಯಾಗಿ ನೀವು ಇಂತಹುದೇ ಬರೆವಣಿಗೆಗಳಲ್ಲಿ ತೊಡಗಿಸಿಕೊಂಡು ಆಸ್ವಾದನೆಯ, ಬರೆಹಗಳ ಶೈಲಿಯ ಮಜಲುಗಳ ವ್ಯಾಪ್ತಿಯನ್ನು ವಿಸ್ತರಿಸಬಹುದು. ನೂಪುರ ಸದಭಿರುಚಿಯ ಪ್ರಯತ್ನಗಳಿಗೆ ಮುಕ್ತವಾಗಿದೆ.)**

ಮನುಷ್ಯಲಿ ಆಗಿ ಹುಟ್ಟಿದ ಮೇಗೆ ಸಂಗೀತ– ಸಾಹಿತ್ಯಲ್ಲಿ ಇಷ್ಟ ಇಪ್ಪಲೇ ಬೇಕಡ. ಹಾಂಗೊಂದು ಮಾತು ಇದ್ದು. ಒಪ್ಪಣ್ಣಂಗುದೇ ನಿಂಗಳ ಹಾಂಗೇ ಸಂಗೀತಲ್ಲಿ ತುಂಬಾ ಆಸಕ್ತಿ, ಮದಲಿಂದಲೇ. ಕೆಸೆಟ್ಟು ಹಾಕಿ ಕೇಳುಲೆ ಸುರು ಮಾಡಿರೆ ಊರು ಅಡಿ ಮೊಗಚ್ಚಿರೂ ಗೊಂತಾಗ. ಜೋನು ಹಿಗ್ಗಿನ್ಸು ಹಾಡಿದ 'ಎಂದರೋ...', ಚೆಂಬೈ ಅಜ್ಜ ಹಾಡಿದ 'ವಾತಾಪಿ...', ಯೇಸುದಾಸಿನ 'ಸಾರಸಮುಖಿ', ಯಮ್ಮೆಲ್ವಿ ಅಜ್ಜಿ ಹಾಡಿದ 'ನನುಪಾಲಿಂಪ' ಎಲ್ಲ ಕೆಸೆಟ್ಟುಗಳಲ್ಲಿ ಮಡಿಕ್ಕೊಂಡು ಇಕ್ಕು, ಯಕ್ಷಗಾನದ ಕೆಸೆಟ್ಟುಗಳ ಒಟ್ಟೊಟ್ಟಿಂಗೆ! ಅಷ್ಟಪ್ಪಗ ಸಂಗೀತ ಹೇಳಿತ್ತು ಕಂಡ್ರೆ ಪದಂಗಳ ರಾಗವೂ, ತಾಳವೂ ಅರ್ತ ಅಕ್ಕು ಅಷ್ಟೆ. ಭಾಷೆಯೂ, ಭಾವವೂ ಅರ್ತ ಆಗಿಯೊಂಡು ಇತ್ತಿಲ್ಲೆ. ಸಾಮಾನ್ಯವಾಗಿ ಕೇಳಿಗೊಂಡು ಇದ್ದದು ದಕ್ಷಿಣಾದಿಯೇ ಇದಾ! ಸದ್ಯ ಉತ್ತರಾದಿಯುದೇ ಕೇಳುಲೆ ಸುರು ಮಾಡಿದ್ದಲಿ ಒಪ್ಪಣ್ಣ. ಅದರಲ್ಲಿ 'ಭಾವ' ಜಾಸ್ತಿ ಅಡ ಅಲ್ದಾ..!

ಓ ಮೊನ್ನೆ ಒಂದರಿ ಸಂಗೀತ ಕೇಳೆಕ್ಕು ಹೇಳಿ ಅನಿಸಿ ಅಪ್ಪಗ ಕೆಸೆಟ್ಟು ಪೆಟ್ಟಿಗೆ ತೆಗದು ಕೂದುಗೊಂಡೆ. ಮೋಹನ ರಾಗ– ಡಾ. ಎಮ್. ಬಾಲಮುರಳಿ –ಹರಿಪ್ರಸಾದ್ ಚೌರಾಸಿಯಾ ಹೇಳಿ ಒಂದು ಕೆಸೆಟ್ಟು ಕಂಡತ್ತು. ದ್ವಂದ್ವ ಅಡ, ಬಡಗಲಾಗಿ ಅದರ 'ಜುಗಲ್

(ಯುಗಳ=೨) ಬಂದಿ' ಹೇಳುದಡ. ಅದರ ಮೇಗೆ ಇಬ್ರ ಪಟಂಗ. ಸಣ್ಣ ಮಕ್ಕೊ ಮಣ್ಣಿ ತಿಂಬಗ ಮಾಡಿದ ಹಾಂಗೆ ಮಾಡಿ, ಮುಗ್ಧ ಕಣ್ಣಿಲಿ ಒಂದು ನೆಗೆ ಮಾಡಿ ಇಪ್ಪ ಪೋಸಿಲಿ, ಲಾಲುಗಂದ ಬೊಟ್ಟು ಹಾಕಿದ – ಬಾಲಮುರಳಿಯ ಪಟ. ಅವನ ಬಲತ್ತಿಂಗೆ ಒಂದು ಉದ್ದದ ಕೊಳಲು ಹಿಡ್ಕೊಂಡು – ದಕ್ಷಿಣಾದಿಯ ಕೊಳಲಿನ ಹಾಂಗೆ ಬರೇ ಸಣ್ಣದಲ್ಲ– ರಜ ಉದ್ದ, ರಜ್ಜ ತೋರ – ಕಾಂಬಲುದೇ, ಸ್ವರವುದೇ! – ಬಾನ್ಸುರಿ (ಬಾನ್ಸು = ಬೆದುರು) ಹೇಳುದಡ ಅದಕ್ಕೆ – ಅದರ ಹಿಡ್ಕೊಂಡು ಬೆರಳಿಲಿ – ಮಾಟ ಮಾಡಿದ ಹಾಂಗೆ – ಎಂತದೋ ಸಂಜ್ಞೆ ಕೊಟ್ಟುಗೊಂಡು – ಈ ಕೆಸೆಟ್ಟಿನ ಕೇಳು ಹೇಳಿಗೊಂಡು ಇತ್ತಿದ್ದಲಿ ಚೌರಾಸಿಯಲಿ. ರಜ ಆಸಕ್ತಿ ಹುಟ್ಟುಸಿತ್ತು.

ಬಾಲಮುರಳಿ ಹೇಳಿರೆ ದಕ್ಷಿಣಾದಿ ಸಂಗೀತದ ಬಲಿಪ್ಪ. ಒಳ್ಳೆ ಸ್ವರವುದೇ ಇದಾ! ಮಂದ್ರ ಷಡ್ಜಂದ ತಾರಕ ನಿಷಾದವರೆಗೆ ಆರಾಮಲ್ಲಿ ಏರುಸುತ್ತಲಿ. ಆಶು ಕವಿ ಅಡ. ಸ್ವತಃ ಕೀರ್ತನೆಗಳ ಬರದು ಹಾಡ್ತನಡ. ಅಷ್ಟಾಗಿ ಚೌರಾಸಿಯ ಹೇಳಿರುದೇ ಚಿಲ್ಲರೆ ಜೆನ ಏನಲ್ಲ. ಕೊಳಲಿನ ಮಾತಾಡುಸುತ್ತನಡ. ಅಂತೂ, ಬಾಲಮುರಳಿ–ಚೌರಾಸಿಯ ಒಂದು ವಿಶೇಷ ಬೆರಕ್ಕೆ ಹೇಳಿ ಅನಿಸಿತ್ತು ಒಪ್ಪಣ್ಣಂಗೆ.

ಇವಿಬ್ರುದೇ ಹುಟ್ಟಿದ್ದು, ಸಂಗೀತ ಕಲ್ತದು, ಪ್ರಸಿದ್ಧಿಗೆ ಬಂದದು – ಎಲ್ಲವುದೇ ಬೇರೆ ಬೇರೆ ಊರಿಲಿ. ಇಬ್ರಿಂಗೂ ಗುರುಮುಖೇನ ಪಾಟ ಆದರೂ, ಆದ ಕ್ರಮವೇ ಬೇರೆ ಬೇರೆ. ಕಲ್ತ ಸಂಗೀತಂಗೊ ಬೇರೆ ಬೇರೆ. ಉಂಬ ಊಟ ಬೇರೆ, ಹಾಡಿ ಬೆಳದ ವಾತಾವರಣ ಬೇರೆ ಬೇರೆ. ಪಕ್ಕನೆ ಅವರ ಇಬ್ರನ್ನೂ ಒಂದೇ ಕಚೇರಿಗೆ ಕೂರುಸಿ ಅವಿಲು ಮಾಡಿರೆ ಹೇಂಗಕ್ಕಪ್ಪಾ!? ಒಂದರಿ ಕೇಳುಲೇ ಬೇಕು ಹೇಳಿ ಅನಿಸಿ ಹೋತು.

ಷಡ್ಜ–ಋಷಭ–ಗಾಂಧಾರ–ಪಂಚಮ–ದೈವತ – ಇವಿಷ್ಟು ಮೋಹನ ರಾಗದ ಅಸ್ಥಿಪಂಜರ. ಸ–ರಿ–ಗ–ಪ–ದ–ಸ ಹೇಳ್ತ ಐದು ಸ್ವರವ ಕುಣಿಸಿ ಅಪ್ಪಗ ಸಿಕ್ಕುತ್ತದು ಮೋಹನ ರಾಗ. ಮತ್ತೆ ಕಲಾವಿದನ ಚಾಕಚಕ್ಯತೆ, ಶೈಲಿ, ತಾಕತ್ತಿನ ಮೇಗೆ ಸ್ವರ ವಿಸ್ತಾರ ಮಾಡ್ತಲಿ. ಒಬ್ಬೊಬ್ಬಂದು ಒಂದೊಂದು ಶೈಲಿ. ಹುಟ್ಟು– ಬಾಲ್ಯ– ಕೌಮಾರ್ಯ–ಗೃಹಸ್ಥ–ವಾನಪ್ರಸ್ಥ – ಇವಿಷ್ಟು ಮನುಷ್ಯ ಜನ್ಮದ ಅವಿಭಾಜ್ಯ ಅಂಶಂಗೊ. ಒಬ್ಬೊಬ್ಬನ ಚಾಕಚಕ್ಯತೆಲಿ ಒಂದೊಂದು ಎತ್ತರಕ್ಕೆ ಏರುತ್ತವು. ಅವರವರ ಶಕ್ತಿಗೆ, ಅವರವರ ಭಾವಕ್ಕೆ ಅನುಕೂಲ ಆದ ಹಾಂಗೆ.

**ಷಡ್ಜ:**

'ಯೋವೇದಾದೌಸ್ವರಃ' ಹೇಳಿ ಗಣೇಶಮಾವ ಓಂಕಾರವ ಹೇಳಿತ್ತಿದ್ದವು, ಮೊನ್ನೆ ಒಂದರಿ ಮಾತಾಡುವಗ. ವೇದಾರಂಭಲ್ಲಿಪ್ಪ ಓಂಕಾರ ಸುರು ಅಪ್ಪದೇ ಷಡ್ಜಂದ ಅಡ. ಸಂಗೀತ ಆರಂಬ ಅಪ್ಪದುದೇ ಷಡ್ಜಂದಲೇ. ಯೇವ ಸಂಗೀತಗಾರನೂ, ಎಷ್ಟು ದೊಡ್ಡ ಕಚೇರಿ ಆದರೂ ಸುರು ಮಾಡುದು ಸ–ಪ–ಸಂದ. ಅಡಿಪಾಯ ಗಟ್ಟಿ ಇದ್ದು ಹೇಳಿ ಆದರೆ ಮಾಂತ್ರ ಪೆಂಟಗನ್ನೂ ನಿಂಗು, ತೇಜಮಹಾಲಯವೂ ನಿಂಗು. ಮುಂದಿನ ಮುಕ್ಕಾಲುಗಂಟೆಯ ಭರ್ತಿ ಸಂಗೀತದ ಸಮೃದ್ಧ ಹಂತಿ ಊಟಕ್ಕೆ ಗಂಭೀರ ಆರಂಭ ಕೊಟ್ಟಲಿ, ಬಾಲಮುರಳಿ. ವಾಹ್! ಎಂತಾ ಆರಂಭ, ಮಂದ್ರ ಗಾಂಭೀರ್ಯ!

ಮನುಷ್ಯನ ಜೀವನ ಆರಂಭ ಅಪ್ಪದು ಅಮ್ಮನ ಹೊಟ್ಟೆಂದ. ಬಾಬೆ ಹುಟ್ಟುವಗಳೇ ಅಂತಾ ಒಂದು ಸಂಭ್ರಮ, ಮನೆ–ಮನ ಇಡೀಕ. ಮುಂದೆಂತ ಹೇಳ್ತ ನಿರೀಕ್ಷೆ – ಉತ್ಸಾಹ.

**ಋಷಭ:**

ಅನುಕರಣೆ ತಪ್ಪು, ಆದರೆ ಅನುಸರಣೆ ಬೇಕೇ ಬೇಕು. ಸುರುವಾಣದ್ದರ ನೋಡಿ ಅದೇ





ನಮುನೆ ನೊಣ ಪ್ರತಿ ತೆಗವದರ ಅನುಕರಣ ಹೇಳುದು, ಸಾರವ ಮಾಂತ್ರ ತೆಕ್ಕೊಂಡು ಮುಂದುವರಿವದಕ್ಕೆ ಅನುಸರಣ ಹೇಳುದು – ಹೇಳಿ ತಾಳಮದ್ದಳೆಗೆ ಅರ್ತ ಹೇಳ್ತ ಜೆನಂಗೊ ಹೇಳಿದ್ದು ಕೇಳಿತ್ತಿದ್ದೆ ಓ ಮೊನ್ನೆ. 'ಎರಡನೇ'ದು ಹೇಳಿರೆ ಸುರುವಾಣದ್ದರ ಅನುಸರಣೆ ಆಗಿರೆಕ್ಕು. ಒಂದರ್ಥಲ್ಲಿ ಪ್ರಥಮತೆಂದಲೂ ದ್ವಿತೀಯತೆ ಮುಖ್ಯ. ನೂರು ಮೀಟರು ಓಡುವಗ ಎರಡ್ನೇಯವಲಿ ತುಂಬ ಹಿಂದೆ ಇದ್ದರೆ ಸುರುವಾಣವಂಗೆ ಗೆದ್ದ ಸಾರ್ತಕತೆಯೇ ಇರ್ತಿಲ್ಲೆ, ಒಂದೇ ಅಂಗುಲ ವೆತ್ಯಾಸ ಆದರೆ ಆ ಕುಶಿ ಮತ್ತಲ್ಲ!

ಷಡ್ಜದಷ್ಟೇ ರಸವತ್ತಾದ ರಿಷಭ ನಮ್ಮ ಜೀವನಲ್ಲಿ ಸಿಕ್ಕುತ್ತಾ ಹೋಯೆಕ್ಕು. ಹುಟ್ಟಿದ ಬಾಬೆಯ ಬೆಳವಣಿಗೆಗೆ ಪರಿಸರ ಹೇಂಗಿರ್ತು ಹೇಳುದು ಹುಟ್ಟಿದ್ದರಿಂದಲೂ ಹೆಚ್ಚು ಮುಖ್ಯ, ಆಸಕ್ತಿದಾಯಕ. ಋಷಭದ ಮುಂದುವರಿಕೆ ಬೆಳವಣಿಗೆಯ ಹಂತ.

**ಗಾಂಧಾರ:**

ಷಡ್ಜದ ಆರಂಬ, ಋಷಭದ ಮುಂದುವರಿಕೆ ಸಿಕ್ಕಿದ ಮತ್ತೆ ಆ ಪರಿಸರಲ್ಲಿ ತಲ್ಲೀನತೆ ಬೇಕು, ಅಲ್ಲದೋ? ಚೆಂದದ ಪರಿಸರಲ್ಲಿ ಬೆಳೆತ್ತಾ ಇಪ್ಪ ಮಗುವಿನ ತಲ್ಲೀನತೆ ಯೇವದರಲ್ಲಿ ಇದ್ದು? ನೆಡು ಪ್ರಾಯಲ್ಲಿ ಅದರ ಆಸಕ್ತಿಯ ವಿಷಯಂಗೊ ಹೇಂಗೆ ಇದ್ದು, ಮನೆತನವ ಮುಂದುವರುಶುಲೆ ಸಮರ್ತ ಆಗಿ ಬೆಳೆತ್ತಾ ಇದ್ದೋ? ಈ ವಿಚಾರವ ಅತ್ಯಂತ ಗಮನಲ್ಲಿ ಮಡಗೆಕ್ಕಾವುತ್ತು ಅಪ್ಪಮ್ಮ. ಯಕ್ಷ ಕಿನ್ನರ ಗಾಂಧರ್ವರ ಪ್ರಿಯ ಸ್ವರ ಆದ ಗಾಂಧಾರಲ್ಲಿ ಅದೇ ತಲ್ಲೀನತೆ ಮುಂದುವರಿತ್ತಾ ಹೋವುತ್ತು... ಜೀವನದ ಹಾಂಗೇ...

ಜೀವನ ಕಟ್ಟುಲೆ ಬೇಕಾದ ನಿಯತ್ತು ಬೆಳವದು ಮಧ್ಯ ವಯಸ್ಸಿಲೇ ಅಡ. ಮಾಷ್ಟ್ರುಮಾವಲಿ ಅನುಭವ ಬರದಿತ್ತಿದ್ದವು. ಗಾಂಧಾರದ ತಲ್ಲೀನತೆಲಿ ಕೋಣೆ ಇಡೀ ಒಂದಾತು. ಪದ ಪಷ್ಟ್ಟ್ಳಾಸಿದ್ದು.

**ಪಂಚಮ:**

ಗಾಂಧಾರಲ್ಲಿ ಜೀವನ ಕಟ್ಟಿ ಆದ ಮತ್ತೆ ಪುರುಷ–ಕ್ಷೇತ್ರದ ಪರಿಚಯ, ಸಂಪರ್ಕ.

ಬಾಲಮುರಳಿಯ ಆರಂಭಕ್ಕೆ ಸಾಥ್ ಕೊಡುವಂತಹ ಕೊಳಲು, ಹಿಂದಂದ. ಅಷ್ಟೊತ್ತು ಪುರುಷ ಸ್ವರದ ತಲ್ಲೀನತೆಲಿ ಇದ್ದ ಕೆಮಿಗೊಕ್ಕೆ ಒಂದರಿಯೇ ಕೊಳಲಿನ ಇಂಪು. ಅದುದೇ ಪಂಚಮಲ್ಲಿ. ಕೋಗಿಲೆಯ ಪಿಟ್ಟೆ ಮೈಗೆ ಬಿದ್ದ ಮತ್ತೆ ಮೇಗೆ ನೋಡುವಗ ಒಂದು ಸ್ವರ ಬತ್ತಲ್ದ, ಅದೇ ಸ್ವರ – ಪಂಚಮ. ಮಧ್ಯಮಂದ ಒಂದು ಮೇಗೆಯೇ. ಆದರೆ ಮೋಹನ ರಾಗಕ್ಕೆ ಇದುವೇ ಮಧ್ಯಮ.

ಮಧ್ಯವಯಸ್ಸು ಬಪ್ಪ ಮೊದಲೇ ಸಮಾಜಲ್ಲಿ ಒಂದು ಅಲೆ ಉತ್ಪತ್ತಿ ಮಾಡಿ ಮಡಗುತ್ತಲಿ, ಮನುಷ್ಯ. ಕೊಳಲಿನ ಸಾಥಿನ ಒಟ್ಟೊಟ್ಟಿಂಗೆ ಹೆಜ್ಜೆ ಹಾಕುತ್ತಲಿ. ಹಲವಾರು ಹೊಸ ಹೊಸ ಪ್ರಯೋಗಂಗಳ ಮಾಡ್ತ, ಪ್ರಯತ್ನ ಮಾಡ್ತ, ಮುಂದೆ ಹೋವುತ್ತಲಿ, ಹಿಂದೆ ಬತ್ತಲಿ.ಮೇಲೆ–ಕೆಳ, ಏರು–ತಗ್ಗು ಎಲ್ಲ ಅನುಬವಿಸುತ್ತಲಿ. ಹಿಮ್ಮೇಳದ ಸಹವಾದನ ಕುಟುಂಬದ ಸದಸ್ಯರ ಅನ್ಯೋನ್ಯತೆಯ ಸಂಕೇತ. ಅದರಷ್ಟಕೇ ಓಡುತ್ತ ಶೃತಿ ನಿತ್ಯಜೀವನದ ಶಾಂತತೆಯ ಸಂಕೇತ. ಅದ್ಭುತ ಕವಿ ಸಮಯ. ಇನ್ನುದೇ ಕೇಳಿಗೊಂಡೇ ಇಪ್ಪಲಿ ಹೇಳಿ ಕಾಣ್ತು. . .

ಮುರಳೀರವಳೀ ಹಾ....ಯ್..!

ಹರಿ–ಪ್ರಸಾದ–ಬಾಲ–ಮುರಳೀ–ರವಳೀ– ಹಾ....ಯ್..!

[ಅರ್ತ: ಮುರಳೀರವಳೀ(ಎರಡು ಮುರಳಿ ಇದ್ದು!) ಹೇಳಿರೆ, ಬಾಲ "ಮುರಳಿ" ಕೃಷ್ಣನ ಹತ್ತರೆ ಒಂದು ಮುರಳೀ, ಹರಿಪ್ರಸಾದ ಚೌರಾಸಿಯನ ಹತ್ರೆ ಇನ್ನೊಂದು ಮುರಳಿ (ಕೊಳಲು)

– ಹಾಂಗೆ ಒಟ್ಟು ಎರಡೆರಡು ಮುರಳಿ ಇದ್ದು]

ಆ ಇಡೀ ಕೇಸೆಟ್ಟಿಲಿ ಬಪ್ಪದು ಪದ ಅಷ್ಟೇ! ತುಂಬಾ ಅರ್ತ ಗರ್ಭಿತ. ಎರಡೇ ಗೆರೆಯ ಹುಂಡುಪದ್ಯದ ಸಾಲು..

ಬಾಕಿ ಉಳುದ್ದೆಲ್ಲ ರಾಗ–ತಾನ ಅಷ್ಟೇ.

ಪುರುಷನ ಹತ್ತರೆ ಒಂದು ಅಂಶ, ಸ್ತ್ರೀಯ ಹತ್ತರೆ ಒಂದು ಅಂಶ – ಎರಡೂ ಸೇರಿರೆ ಸಂಸಾರ ತಾನೇ! ಒಂದು ಇಲ್ಲದ್ರೂ ಅದು ಚಕ್ರ ಇಲ್ಲದ್ದ ರಥ.

ಪಂಚಮದ ಸಮ್ಮಿಳನಲ್ಲಿ ಆ ಸಂಸಾರ ಮುಂದುವರಿಯೆಕ್ಕು ಹೇಳುವ ಆಶಯ ಎಲ್ಲಾ ಸಂಸಾರಸ್ಥರದ್ದು.

**ದೈವತ:**

ನೆಡು ಪ್ರಾಯ ಕಳುದ ಮತ್ತೆ ಬೇರೆಂತ ಬೇಕು– ದೇವತಾರಾಧನೆ ಬಿಟ್ಟು?

ಪಂಚಮಲ್ಲಿ ಸಿಕ್ಕಿದ ಅನುಭವಂಗಳ ಮೆಲುಕು ಹಾಯ್ಕೊಂಡು, ಮೊದಲು ಮಾಡಿದ ಸಾಧನೆಯ ನೆಂಪುಮಾಡಿಗೊಂಡು... ಹತ್ತರೆ ಕೂದ ಹೆಂಡತ್ತಿ ಆ ವಿಷಯಂಗಳ ಇನ್ನೂ ಸ್ಪಷ್ಟ ಮಾಡಿ ನೆಂಪಿನ ಜಾಸ್ತಿ ಮಾಡುತ್ತು. ಮುಂದಾಣ ಜೀವಮಾನವ ಯಥಾಯೋಗ್ಯ ಪುಣ್ಯಕಾರ್ಯಲ್ಲಿ ಕಳವದು ಎಲ್ಲಾ ಹಿರಿಯ ಆಶಯ.

ಬಾಲಮುರಳಿ ಅವನೇ ಹುಟ್ಟು ಹಾಕಿ ಬೆಳೆಶಿ, ಸಾಂಕಿದ ಸ್ವರವಿಸ್ತಾರದ ಸೊಂಪಿನ ಅನುಭವಿಸಿಗೊಂಡು ಇದ್ದ. ಸ್ವರದ ಏರಿಳಿತ ಸರೀ ಗೊಂತಾವುತ್ತು, ಕೇಳುವ ಕೆಮಿಗೆ. ಕೊಳಲಿನ ಇಂಪು ಅದರ ನಾದವ ಇನ್ನುದೇ ಜಾಸ್ತಿ ಮಾಡಿತ್ತು. ಒಟ್ಟಾರೆ ಅನುಭವವೇ ಅನುಭವ.

**ಷಡ್ಜ:**

ಮತ್ತೆ ಬಾಲ್ಯ.

ತುಂಬ ಪ್ರಾಯ ಆದ ಮನುಷ್ಯನ ನಡವಳಿಕೆಗೊ ಬಾಲ್ಯಾವಸ್ಥೆಯ ನೆಂಪು ತತ್ತಡ. ದೀರ್ಘಕಾಲ ಒಟ್ಟಿಂಗಿಪ್ಪ ಹೆಂಡತ್ತಿಗೂ ಅದೇ ಅನುಭವ. ಪರಸ್ಪರ ಭಾವನೆಗೊ ಮಾಂತ್ರ, ಬಲ ಇಲ್ಲೆ. ಅನುಭವ ಮಾಂತ್ರ, ಅನುಸ್ವರ ಇಲ್ಲೆ. ಹುಟ್ಟಿಂದ ದೈವತದವರೆಗೆ ತಲ್ಲೀನತೆಲಿ ಜೊತೆಜೊತೆಲಿ ನೆಡದು ಬಂದ ಪಂಚಮದ ಕಾಲವ ನೆನಪಿಸುದೇ ಅಲ್ಲಿಪ್ಪ ಯಥಾ ಶಕ್ತಿ ಕಾರ್ಯ. ಸಣ್ಣಗಿಪ್ಪಗಾಣ ಹಾಂಗೇ ಭಾವನೆಗೊ. ಸ್ಥಿಮಿತಿ, ಮಿತಿ – ಎರಡೂ ಇಲ್ಲೆ. ಅದರಷ್ಟಕ್ಕೇ ಹರಿಯಬಿಡೆಕ್ಕಾವುತ್ತು. ಮುದಿಮರುಳು ಹೇಳ್ತವು. ಆದರೆ ಹಿನ್ನೆಲೆ / ಹಿಮ್ಮೇಳದವಕ್ಕೆ ಸರೀ ಗುರ್ತ ಇದ್ದು. ನಮ್ಮ ಪ್ರತಿ ಚಲನೆಯನ್ನುದೇ ಅವು ಪ್ರಸಾದ ಹೇಳಿ ಸ್ವೀಕರಿಸುತ್ತವು. ಬಾಲ್ಯಲ್ಲಿ ಹುಚ್ಚು ಆಲೋಚನೆಗೊ ಇತ್ತು, ಸಂಪತ್ತು ಶೇಖರಣೆ ಇತ್ತಿಲ್ಲೆ. ವೃದ್ಧಾಪ್ಯಲ್ಲಿ ಸಂಪತ್ತು ಧಾರಾಳ ಇದ್ದು, ಹರಿಯಬಿಡುವ ಹುಚ್ಚು ಇಲ್ಲೆ.

ಬಾಲಮುರಳಿ, ಚೌರಾಸಿಯ, – ಇಬ್ರುದೇ ಇನ್ನು ಮುಗುಶುವ ಏರ್ಪಾಡಿಂಗೆ ಬಂದವು. ರಾಗ–ತಾನ–ಪಲ್ಲವಿಯ ಮೂರು ಹಂತಂಗಳಲ್ಲಿ ಬೇಕಾದಷ್ಟು ಅನುಭವ ಹಂಚಿಗೊಂಡು, ಕುಶಿ ಕೊಟ್ಟು, ಕುಶಿ ತೆಕ್ಕೊಂಡು, ಕೇಳುಗರಿಂಗೆ ಹಬ್ಬದೂಟ ಬಳುಸಿದವು. ಅಂಬಗಂಬಗ ಅಲ್ಲಿ ಕೇಳ್ತವು ಚಪ್ಪಾಳೆ ತಟ್ಟಿದ್ದೇ ಅದಕ್ಕೆ ಸಾಕ್ಷಿ.

ಈಗ, ಉತ್ತರಾದಿ ಹೇಳಿರೆ ಮೂರು ಮಾರು ದೂರ ಹೋಯ್ಕೊಂಡು ಇದ್ದ ಒಪ್ಪಣ್ಣಂಗೆ ರಜಾ ಗುರ್ತ ಅಪ್ಪಲೆ ಸುರು ಆತು. ಬಾಲಮುರಳಿ ಚೌರಾಸಿಯನ ಗುರ್ತ ಮಾಡುಸಿದ. ಇವನಿಂದಾಗಿ ಅವನ, ಅವನಿಂದಾಗಿ ಮತ್ತೊಬ್ಬನ, ಮತ್ತೊಬ್ಬನಿಂದಾಗಿ ಇನ್ನೊಬ್ಬನ – ಹೀಂಗೇ ಗುರ್ತ ಬೆಳದು ಬೆಳದು ಮುಂದುವರಿವದಲ್ಲೋ, ಮಾನವ ಸಮಾಜ?





ಬರೇ ಒಂದು ಕಚೇರಿಯ ಅರ್ತಮಾಡುವಗ ಒಂದು ಮಾನವ ಸಮಾಜದ ಅರ್ತ ಆವುತ್ತು. ಅಂಬಗ ಸಂಗೀತಲ್ಲಿ ಎಂತಾ ಶಕ್ತಿ ಇದ್ದು?

ಮೋಹನ ರಾಗದ ಭಾವ ಉತ್ಸಾಹಪೂರ್ಣ ಶಾಂತಿ ಅಡ. 'ಅಪ್ಪನ್ನೇ!' ಹೇಳಿ ಆತೆನಗೆ. ಕೇಳ್ತಾ ಇಪ್ಪಗ ಹಳೆ ಕೆಲವು ಮನಶ್ಶಾಂತಿ ತಪ್ಪ ಘಟನೆಗೊ ಎಲ್ಲ ನೆಂಪಾತು. ಪ್ರಾಯ ಅಲ್ಲಿಗೇ ನಿಂದು, ಕೆಳಾಂತಾಗಿ ಹೋದ ಹಾಂಗೆ ಅನಿಸಿತ್ತು. ಸುಮ್ಮನೆ ಅಲ್ಲ ಗಂಗಜ್ಜಿ (ಗಂಗೂಬಾಯಿ ಹಾನಗಲ್) ತೊಂಬತ್ತೈದು ವರ್ಷ ಬದ್ಕಿದ್ದು. :–)

ಪ್ರಪಂಚಲ್ಲಿ ಯೇವದೇ ಜಗಳ ಇಲ್ಲದ್ದ ವಾತಾವರಣ ಅನಿಸಿ ಕುಶೀ ಆತು! ಯೇವ ಜಗಳವೂ ಇಲ್ಲೆ. ಜಾಗೆ ತಕರಾರು, ನೀರಿನ ಜಗಳ, ಹೋಕ್ವರ್ಕು ಬಿಟ್ಟದು, ಇಂತಾ ಎಲ್ಲಾ ಚಿರಿಪಿರಿ ಬಿಟ್ಟ ಶಾಂತತೆ (ಶಾಂತತ್ತೆ ಅಲ್ಲ!) ಇಪ್ಪ ವಾತಾವರಣ ಅನಿಸಿ ಹೋತು. ರಾಜ್ಯ – ರಾಜ್ಯದ ನಡುವೆ, ದೇಶ–ದೇಶದ ನಡುವೆ, ಜೆನ–ಜೆನದ ನಡುವೆ ಇರ್ತ ಎಲ್ಲ ಜಗಳ ನಂದಿ ಹೋದ ವಾತಾವರಣ ಅನಿಸಿ ಹೋತು. ಎಲ್ಲ ಉಗ್ರವಾದ ಶಮನ ಆದ ಸುಖ–ನೆಮ್ಮದಿ ಅನಿಸಿ ಹೋತು.

ಉಗ್ರವಾದಿ ಲಾಡೆನ್ನಿಂಗೆ ಇದರ ಕೇಳುಸಿರೆ ಬೆಡಿ ಕರೆಲಿ ಮಡಗಿ ವೀಣೆ ಹಿಡ್ಕೊಂಗೋ ಹೇಳಿ ಒಂದು ಕನುಪ್ಯೂಸು ಬಂದದು, ಒಪ್ಪಣ್ಣಂಗೆ. ಎಂತ ಹೇಳ್ತಿ? :–)

■




**ನವಂಬರ್ ೯:** ಶ್ರೀದೇವೀ ನೃತ್ಯ ಕೇಂದ್ರ, ಮಂಗಳೂರು ಪ್ರಾಯೋಜಿಸುವ ನೃತ್ಯೋತ್ಸವ. ಖ್ಯಾತ ಚಲನಚಿತ್ರ ನಟಿ, ನೃತ್ಯ ಕಲಾವಿದೆ ವೈಜಯಂತಿ ಮಾಲಾ ಬಾಲಿ ಅವರಿಗೆ 'ನಾಟ್ಯಕಲಾ ತಪಸ್ವಿನೀ' ಬಿರುದು ಪ್ರದಾನ. ದಂಡಾಯುಧ ಪಾಣಿ ಪಿಳ್ಳೈ ಸಂಯೋಜನೆಯ 'ಚಿತ್ರಾಂಬಲ ಕೊರವಂಜಿ' ನೃತ್ಯ ನಾಟಕ ಪ್ರದರ್ಶನ. ಸ್ಥಳ : ಪುರಭವನ, ಮಂಗಳೂರು.

**ನವಂಬರ್ ೨ ಮತ್ತು ೩ :** ಪ್ರಥಮ ಬಾರಿಗೆ ಕರ್ನಾಟಕದ ಪ್ರತಿಭಾವಂತ ಹನ್ನೊಂದು ಯುವ ನೃತ್ಯಕಲಾವಿದರ ಪ್ರತ್ಯೇಕ ನೃತ್ಯ ಪ್ರದರ್ಶನ. ಸ್ಥಳ : ಮ್ಯೂಸಿಕ್ ಅಕಾಡೆಮಿ ಮಿನಿ ಹಾಲ್, ಚೆನ್ನೈ.

**ನವೆಂಬರ್ ೨೨ :** ಶ್ರೀನಾಥ್ ಮರಾಠೆ ನೇತೃತ್ವದಲ್ಲಿ ಉದ್ಯಾವರ ಮಾಧವ ಆಚಾರ್ಯ ಪ್ರಸ್ತುತಪಡಿಸುವ ಕಥಾ ನೃತ್ಯ 'ಸೀಳು ಬಿದಿರಿನ ಸಿಳ್ಳು', ಸ್ಥಳ: ಮಂಗಳೂರಿನ ಕೊಡಿಯಾಲ್ ಬೈಲ್ ಹಳೆ ಕರ್ನಾಟಕ ಬ್ಯಾಂಕ್ ಕಟ್ಟಡದ ಸಭಾ ಭವನ.

**ನವಂಬರ್ ೨೯ :** ಸೃಷ್ಟಿ ರಾಷ್ಟ್ರೀಯ ಸಂಗೀತ ನೃತ್ಯೋತ್ಸವ. ಸ್ಥಳ : ರವೀಂದ್ರ ಕಲಾಕ್ಷೇತ್ರ, ಬೆಂಗಳೂರು.

**ಡಿಸೆಂಬರ್ ೫ :** ಪುತ್ತೂರಿನ ಮೂಕಾಂಬಿಕಾ ನೃತ್ಯ ಕಲಾಶಾಲೆಯ ಗುರು ವಿದ್ವಾನ್ ದೀಪಕ್ ಕುಮಾರ್ ಅವರ ಶಿಷ್ಯೆ ಅನುಷಾ ಜೈನ್ ಅವರ ರಂಗಪ್ರವೇಶ. ಸ್ಥಳ : ಮಹೋತ್ಸವ ಭವನ, ಧರ್ಮಸ್ಥಳ.

**ಜನವರಿ ೨ :** ಪುತ್ತೂರಿನ ವಿದ್ವಾನ್ ದೀಪಕ್ ಕುಮಾರ್ ಅವರ ಶಿಷ್ಯೆ ದಾಕ್ಷಾಯಿಣಿ ಅವರ ರಂಗಪ್ರವೇಶ. ಸ್ಥಳ: ಪುರಭವನ, ಮಂಗಳೂರು.

■

# ದರ್ಪಣ

# ನೃತ್ಯ ರಂಗದ ಅನಭಿಷಿಕ್ತ ರಾಣಿ: ರುಕ್ಮಿಣಿ

...... ಈವರೆಗೆ

(ರುಕ್ಮಿಣೀಯ ಸುಧಾರಣೆಗಳು ವ್ಯಾಪಕ ಪರಿಣಾಮ ಬೀರಲು ಆರಂಭಿಸಿದ್ದವು. ಅದರ ಪರಂಪರೆಗಳಿಗೆ ವಿವಿಧ ದೇಶೀಯ ಕಲಾ ಶೈಲಿಯ ನೃತ್ಯ ಪ್ರಕಾರಗಳ, ಸಂಗೀತದ ಗುರುಗಳು ಕೈಜೋಡಿಸಿದರು. ಅವರಲ್ಲಿನ ಜ್ಞಾನ, ಸಾಧನೆಗಳು ರುಕ್ಮಿಣೀಯವರ ಮುಂದಿನ ನೃತ್ಯ ಸಂಯೋಜನೆಗಳಿಗೆ ಬೃಹತ್ ಭಾಷ್ಯವನ್ನೇ ಬರೆಯಿತು. ಒಟ್ಟಿನಲ್ಲಿ ನೃತ್ಯ ಶಿಕ್ಷಣವನ್ನು ವ್ಯವಸ್ಥಿತಗೊಳಿಸಿ, ಅದಕ್ಕೆ ಚೆಂದದ ಹೂರಣ, ಆವರಣವನ್ನು ಒದಗಿಸಿ, ಅಕಾಡೆಮಿಕ್ ವಲಯದಲ್ಲಿ ಉನ್ನತ ಸ್ಥಾನಮಾನವನ್ನಿತ್ತಿದ್ದು 'ಕಲಾಕ್ಷೇತ್ರ'. ರುಕ್ಮಿಣೀಯಲ್ಲಿರುವ ಶಕ್ತಿಯನ್ನು ಗುರುತಿಸಿದ್ದ ಆ್ಯನಿ ಬೆಸೆಂಟ್ ವಿಶ್ವ ಮಾತೃ ಸಪ್ತಾಹದ ನಾಯಕಿಯನ್ನಾಗಿಸಿ 'ದೇವಿ' ಎಂಬ ಮಹತ್ತರ ಅಭಿಧಾನವನ್ನಿತ್ತಿದ್ದರು. ಅಂದಿನಿಂದ ರುಕ್ಮಿಣೀ 'ರುಕ್ಮಿಣೀದೇವೀ')



ಆಲದ ಮರ ಬೆಳೆಯಲು ನಿಧಾನಗತಿ ಅನುಸರಿಸಿದರೂ ತಳವೂರಿ ಅಗಾಧವಾಗಿ ಹರಡುತ್ತದೆ. ಅಂತೆಯೇ ಗುರುಕುಲ ಪದ್ಧತಿಯ ಬೇರುಗಳೂ ಕೂಡಾ ! ಅದಕ್ಕೆ ರೂಪಕವೋ ಎಂಬಂತೆ ಹೆಚ್ಚಿನ ಪಾಠಗಳು ಅಡ್ಯಾರ್‌ನ ದೈತ್ಯ ಆಲದ ಮರಗಳ ನೆರಳಿನಲ್ಲಿಯೆ ನಡೆಯುತ್ತಿದ್ದವು. ರುಕ್ಮಿಣೀದೇವಿ ಸ್ವತಃ ತಾವೇ ನೃತ್ಯ ಪಾಠ ಮಾಡುತ್ತಿದ್ದರು. ಅದೇ ಆವರಣದಲ್ಲಿ ವಿದ್ಯಾರ್ಥಿಗಳ ಪ್ರೌಢ ಶಿಕ್ಷಣಕ್ಕೆ ಅನುಕೂಲವಾಗಲು ಬೆಸೆಂಟ್ ಥಿಯೋಸೋಫಿಕಲ್ ಹೈಸ್ಕೂಲ್ ಕೂಡಾ ಇತ್ತು. ಇದರ ಮುಖ್ಯೋಪಾಧ್ಯಾಯರಾದ ಶಂಕರ ಮೆನನ್ ಹಿಂದೂ ತತ್ವಜ್ಞಾನದ ಪಾಠಗಳನ್ನು ಮಾಡುತ್ತಿದ್ದರು.

ನೃತ್ಯ ವಿಭಾಗಕ್ಕೆ ರುಕ್ಮಿಣೀದೇವಿಯವರ ಸೊಸೆ ರಾಧಾ, ಆನಂದಿ, ಶಾರದಾ ; ಸಂಗೀತ ವಿಭಾಗಕ್ಕೆ ರಾಮನ್, ಡಿ.ಪಶುಪತಿ, ಲಕ್ಷ್ಮಣನ್ ಮೊದಲಾದವರು ಕಲಾಕ್ಷೇತ್ರದ ಆರಂಭಿಕ ವಿದ್ಯಾರ್ಥಿಗಳು. ಮೊದಮೊದಲು ರುಕ್ಮಿಣೀದೇವಿಯರನ್ನು, ಕಲಾಕ್ಷೇತ್ರವನ್ನು





'ದೇವದಾಸಿ ಆಶ್ರಯದಲ್ಲಿದ್ದ ಸಾದಿರ್' ಎಂಬ ಕಾರಣವೊಡ್ಡಿ ಸಮಾಜ ಸುಧಾರಕಿಯಾಗಿದ್ದರೂ ಪ್ರಬಲವಾಗಿ ವಿರೋಧಿಸಿದ್ದ ಮುತ್ತುಲಕ್ಷ್ಮಿ ರೆಡ್ಡಿಯವರು ಕೂಡಾ ತಾವು ನಡೆಸುತ್ತಿದ್ದ 'ಅವ್ವೈ' ಆಶ್ರಮದಿಂದಲೂ ಹೆಣ್ಣು ಮಕ್ಕಳನ್ನು ನೃತ್ಯಾಭ್ಯಾಸಕ್ಕೆ ಕಳುಹಿಸಿದರು.

ಇವರೆಲ್ಲರೊಂದಿಗೆ ಧನಂಜಯನ್, ಚಂದು ಪಣಿಕ್ಕರ್ ಅವರ ಮಗ ಜನಾರ್ಧನ್, ಬಾಲಗೋಪಾಲನ್, ಕುಂಞರಾಮನ್, ಶಾರದಾ ಹಾಫ್‌ಮನ್, ಲೀಲಾವತಿ, ಕಮಲಾ ರಾಣಿ, ಕಮಲಾದೇವಿ ಚಟ್ಟೋಪಾಧ್ಯಾಯ, ಸಂಜುಕ್ತ ಪಾಣಿಗ್ರಾಹಿ, ಸಿ.ವಿ.ಚಂದ್ರಶೇಖರ್, ಯಾಮಿನಿ ಕೃಷ್ಣಮೂರ್ತಿ, ಲೀಲಾ ಸಾಮ್ಸನ್ ಮುಂತಾದವರು ಕಲಾಕ್ಷೇತ್ರದ ಗರಡಿಯಲ್ಲಿನ ಮೊದಲ ಶಿಷ್ಯರು. ಕ್ರಮೇಣ ನಂತರದ ವರ್ಷಗಳಲ್ಲಿ ಡಾ. ಪದ್ಮಾಸಿನಿ, ಎಂ.ಡಿ.ಮಣಿ, ಗಾಯತ್ರಿದೇವಿ, ವಳ್ಳಿ, ರಾಮರಾವ್, ಸತ್ಯಲಿಂಗಂ, ವಸಂತವೇದಂ, ರಮಾರವಿ, ಉಮಾಸುಂದರಂ, ಶಾಂತಾ ಧನಂಜಯನ್, ಅಮಲಾ ಅಕ್ಕಿನೇನಿ, ಸುಮಿತ್ರಾ ಗೌತಂ, ಸಾವಿತ್ರಿ ನಾಯರ್, ಪುಷ್ಪಾ ಶಿಂಧೆ, ಬೆಂಗಳೂರಿನಲ್ಲಿ ನೆಲೆಸಿರುವ ಪ್ರೊ. ಎಂ.ಆರ್. ಕೃಷ್ಣಮೂರ್ತಿ, ಪ್ರೊ.ವಸಂತಲಕ್ಷ್ಮಿ ಮುಂತಾದ ಖ್ಯಾತನಾಮರೆಲ್ಲಾ ಕಲಾಕ್ಷೇತ್ರದ ಕನಸುಗಳನ್ನು ಭವಿತವ್ಯದ ಜೀವಿತಾವಧಿಯಲ್ಲಿ ನನಸು ಮಾಡಿ ಹೆಸರಾದವರು.

ಕಲಾಕ್ಷೇತ್ರ ಇಂದಿಗೂ ದೇಶ ವಿದೇಶಗಳಲ್ಲಿ ಪ್ರಸಿದ್ಧಿಗೊಂಡಿರುವುದು ತನ್ನ ವೈಭವಯುತವೆನಿಸುವ ನೃತ್ಯ ರೂಪಕಗಳಿಂದ. ಕಲಾಕ್ಷೇತ್ರದ ದಿಗ್ಗಜರೆನಿಸಿದ ಸಂಗೀತ ವಿದ್ವಾಂಸರ ಹಿನ್ನೆಲೆ ಸಂಗೀತ–ಸಾಹಿತ್ಯ ಮತ್ತು ರುಕ್ಮಿಣೀ ಅವರ ನೃತ್ಯ ಸಂಯೋಜನೆಯಲ್ಲಿ ಮೂಡಿಬಂದ ನೃತ್ಯರೂಪಕಗಳು ಸುಮಾರು ಇಪ್ಪತ್ತೆರಡು. ರುಕ್ಮಿಣೀದೇವಿಯವರ ಮೊದಲ ನೃತ್ಯರೂಪಕ ಕುಟ್ರಾಲ ಕೊರವಂಜಿ. ಜಾನಪದದ ಸೊಗಡಿನ, ಹದಿನೆಂಟನೆಯ ಶತಮಾನದ ತಮಿಳು ಗದ್ಯವೊಂದರ ಮೇಲೇ ಆಧರಿತವಾದ ಈ ನೃತ್ಯರೂಪಕ ೧೯೪೪ರಲ್ಲಿ ಮೊದಲು ಪ್ರದರ್ಶಿತವಾಯಿತು. ವೀಣಾ ಕೃಷ್ಣಮಾಚಾರ್ಯರ ಸಂಗೀತದಲ್ಲಿ ಅಮೋಘ ಯಶಸ್ಸು ಗಳಿಸಿದ ಈ ನೃತ್ಯರೂಪಕ ಅನೇಕ ರೂಪಕಗಳಿಗೆ ರುಕ್ಮಿಣೀ ಮನಸ್ಸು ಮಾಡುವಂತೆ ಮಾಡಿತ್ತು !

ಅವರ ಅಮೋಘವೆನಿಸುವ ನೃತ್ಯರೂಪಕಗಳಲ್ಲಿ ಒಂದೆನಿಸಿದ 'ವಾಲ್ಮೀಕಿ ರಾಮಾಯಣಂ' ತನ್ನ ಪೂರ್ಣಾವತಾರ ಪ್ರದರ್ಶಿಸುವ ವೇಳೆಗೆ ರಾಮನ ವನವಾಸದಂತೆಯೇ ಆಗಿತ್ತು ! ಕಾರಣ, ನೃತ್ಯರೂಪಕದ ಸಮಗ್ರ ಸಂಯೋಜನೆಗೆ ರುಕ್ಮಿಣೀ ಅವರ ಅನುಭವದ ಕುಲುಮೆಯಲ್ಲಿ ಸಮೃದ್ಧವಾಗಿ ಪಾಕ ಹದಗೊಳ್ಳಲು ತೆಗೆದುಕೊಂಡಿದ್ದು ಬರೋಬ್ಬರಿ ಪೂರ್ತಿ ೧೪ ವರ್ಷಗಳು ! ಅದು ಅದೃಷ್ಟವೋ? ಕಾಕತಾಳೀಯವೋ? ಅಪೂರ್ವ ಸಂಯೋಜನೆಯ ಶ್ರಮದ ಗುರುತುಗಳೋ.. ಒಟ್ಟಿನಲ್ಲಿ ಎಲ್ಲವೂ ಹೌದು..!

**( ಸಶೇಷ)**




# ಎಚ್ಚರ ತಪ್ಪಿದರೆ ರಾವಣನೂ ಹಾಸ್ಯಗಾರನಾಗುತ್ತಾನೆ!

● ರಾಕೇಶ್ ಕುಮಾರ್ ಕಮ್ಮಜೆ

**ಯ**ಕ್ಷಗಾನ ಕರಾವಳಿಯ ಜನರ ಮುಖ್ಯ ಮನರಂಜನೆಗಳಲ್ಲೊಂದು. ಈಗೀಗ ಬಹುಮಾಧ್ಯಮಗಳ ಎಡೆಬಿಡದ ದಾಳಿಗಳಿಂದ ಯಕ್ಷಗಾನ ಸೊರಗುತ್ತಿರುವಂತೆ ಕಂಡರೂ ಅದರ ರುಚಿ ಇನ್ನೂ ಬತ್ತಿಹೋಗಿಲ್ಲ. ಈಗಲೂ ಯಕ್ಷಗಾನ ಈ ಹಿಂದಿನಷ್ಟೇ ಚಾಲ್ತಿಯಲ್ಲಿದೆ. ಆದರೆ ಒಂದೇ ಒಂದು ಬೇಸರವೆಂದರೆ ಈಗ ಹಿಂದಿನಂತೆ ತಂಡೋಪಾದಿಯಲ್ಲಿ ಹೊಸ ಹೊಸ ಕಲಾವಿದರು ಹುಟ್ಟಿಕೊಳ್ಳುತ್ತಿಲ್ಲ ಅನ್ನುವುದು.

ಒಂದೆರಡು ದಶಕಗಳ ಹಿಂದಕ್ಕೆ ಪ್ರಯಾಣಿಸಿ ಸುತ್ತ ಒಮ್ಮೆ ಕಣ್ಣು ಹಾಯಿಸಿದರೆ ಕರಾವಳಿಯ ಮನೆ ಮನೆಗಳಲ್ಲೂ ನೂತನ ಯಕ್ಷಗಾನ ಕಲಾವಿದನೊಬ್ಬನನ್ನು ಕಾಣಬಹುದಿತ್ತು. ಪೂರ್ಣ ಪ್ರಮಾಣದಲ್ಲಿ ಅಲ್ಲದೇ ಹೋದರೂ ಹವ್ಯಾಸಿಯಾಗಿ ರಂಗಕ್ಕೆ ಬರುವವರು ಅನೇಕರಿದ್ದರು. ಆದರೆ ಈಗ ಹಾಗಿಲ್ಲ. ಪ್ರತೀ ಮನೆ ಬಿಡಿ, ಹತ್ತು ಮನೆಗೊಂದರಂತೆಯೂ ಕಲಾವಿದ ಕಾಣಿಸುತ್ತಿಲ್ಲ. ಇದೇ ತುಸು ವೇದನೆ ತರಿಸುವ ಸಂಗತಿ.

ಹಾಂ, ಹವ್ಯಾಸಿ ಕಲಾವಿದರು ಅನ್ನುವಾಗ ನೆನಪಾಯಿತು ನೋಡಿ. ಮೊದಲೆಲ್ಲಾ ಈ ಹವ್ಯಾಸಿ ಕಲಾವಿದರು ಆಗಾಗ ಅಲ್ಲಿಲ್ಲಿ ಸೇರಿ ತಾಳಮದ್ದಳೆ, ಯಕ್ಷಗಾನಗಳನ್ನು ಸ್ವಂತ ಆಸಕ್ತಿಯಿಂದ ನಡೆಸುತ್ತಿದ್ದರು. ಒಂದೆಡೆ ಮೇಳಗಳ ಅಬ್ಬರವಾದರೆ ಇನ್ನೊಂದೆಡೆ ಈ ಹವ್ಯಾಸಿಗಳ ಪ್ರವೇಶ. ಈ ಹವ್ಯಾಸಿಗಳಿಗೆ ಯಕ್ಷಗಾನವೇ ಉದ್ಯೋಗ ಅಲ್ಲದೇ ಇದ್ದುದರಿಂದ ಕೆಲವೊಮ್ಮೆ ರಂಗದ ಮೇಲೆ ಬಂದಾಗ ಪಾತ್ರಗಳ ಹೆಸರು, ರಾಜ್ಯದ ಹೆಸರು ತಪ್ಪಾಗುವುದು ಸಹಜ. ಅಂಥಾದ್ದೊಂದು ಉದಾಹರಣೆ ಇಲ್ಲಿದೆ.

ದಕ್ಷಿಣ ಕನ್ನಡದ ಮಿತ್ತನಡ್ಕ ಎಂಬಲ್ಲಿ ಒಬ್ಬರು ಹವ್ಯಾಸಿ ಕಲಾವಿದರಿದ್ದರು. ಆಗೀಗ ರಂಗಸ್ಥಳದಲ್ಲಿ ಕಾಣಿಸಿಕೊಳ್ಳುವ ಉಮೇದಿ ಅವರಲ್ಲಿತ್ತು. ಅದರಲ್ಲೂ ಹೆಚ್ಚಾಗಿ ತಾಳಮದ್ದಳೆಗಳಲ್ಲಿ ಅರ್ಥಧಾರಿಯಾಗಿ ಅವರು ಭಾಗವಹಿಸುತ್ತಿದ್ದರು. ಒಮ್ಮೆ ಮಿತ್ತನಡ್ಕದಲ್ಲೇ ತಾಳಮದ್ದಳೆ ಏರ್ಪಾಡಾಗಿತ್ತು. ಲಂಕಾದಹನ ಪ್ರಸಂಗ. ಇವರು ರಾವಣ.

ಸರಿ, ತಾಳಮದ್ದಳೆ ಶುರುವಾಯಿತು. ರಾವಣನ ಪ್ರವೇಶವೂ ಆಯಿತು. ಭಾಗವತಿಕೆ ಮುಗಿದು ಇನ್ನು ರಾವಣ ಪೀಠಿಕೆ ಶುರು ಮಾಡಬೇಕು. ಇವರು ಆರಂಭಿಸಿದರು. "ಬಲ್ಲಿರೇನಯ್ಯ? ಹಸ್ತಿನಾವತಿಗೆ ಯಾರೆಂದುಕೊಂಡಿರಿ?"

ಆಗ ಚೆಂಡೆ ಬಾರಿಸಲು ನಿಂತಿದ್ದವರು ಈ ಮೊದಲೊಮ್ಮೆ ಇದೇ 'ರಂಗಸ್ಥಳ'ದಲ್ಲಿ ಮಿಂಚಿ ಹೋದ ನೆಡ್ಲೆ ನರಸಿಂಹ ಭಟ್ಟರು. ಅವರು ಕೂಡಲೇ ರಾವಣನಿಗೆ ಚೆಂಡೆಯ ಕೋಲಿನಿಂದ ಹಿಂದಿನಿಂತ ಕುಟ್ಟಿ 'ಹಸ್ತಿನಾವತಿ ಅಲ್ಲ, ಲಂಕೆ, ಲಂಕೆ' ಅಂತ ಎಚ್ಚರಿಸಿದರು.

ಅಂಥಾ ಪ್ರಚಂಡ ರಾವಣನಿಗೆ ತನ್ನ ರಾಜ್ಯದ ಹೆಸರೇ ಗೊತ್ತಿಲ್ಲವೆಂದರೆ ಅದೆಂಥಾ ನಾಚಿಕೆ? ಒಂದೊಮ್ಮೆ ಅವರು ಇನ್ಯಾವುದೋ ರಾಜ್ಯದ ಹೆಸರು ಹೇಳಿದ್ದರೂ ಸಹಿಸಿಕೊಳ್ಳಬಹುದಿತ್ತು. ಆದರೆ ಹಸ್ತಿನಾವತಿ ಅಂದರೆ ಹೇಗೆ? ಯಾಕೆಂದರೆ ಹಸ್ತಿನಾವತಿ ಬರುವುದು ಮಹಾಭಾರತದಲ್ಲಿ, ಈಗಿನ್ನೂ ರಾಮಾಯಣ ನಡೆಯುತ್ತಿದೆಯಷ್ಟೇ! ಛೆ, ಛೆ ಅಬದ್ಧ ಅಬದ್ಧ!!

ರಾವಣನ ಪಾತ್ರಧಾರಿಗೆ ತಾನೆಸಗಿದ ತಪ್ಪಿನ ಅರಿವಾಯಿತು. ಕೂಡಲೇ ತಿದ್ದಿಕೊಳ್ಳಬೇಕೆಂಬ ಭರದಲ್ಲಿ 'ಅಂದಹಾಗೆ ತಪ್ಪಿತು ತಪ್ಪಿತು, ನಮ್ಮದ್ದು ಹಸ್ತಿನಾವತಿಯಲ್ಲ, ಲಂಕೆ ಆಯ್ತಾ?' ಎಂದೇಬಿಟ್ಟರು! ಈ





ಮೊದಲು 'ಹಸ್ತಿನಾವತಿಗೆ ಯಾರೆಂದುಕೊಂಡಿರಿ?' ಅಂದಿದ್ದಾಗ ಹೆಚ್ಚಿನವರಿಗೆ ಅದು ಗೊತ್ತಾಗಿರಲಿಲ್ಲ. ಗೊತ್ತಾದ ಕೆಲವರು ಮಾತ್ರ ಮುಸಿ ಮುಸಿ ನಕ್ಕಿದ್ದರು. ಈಗ ಹಾಗಲ್ಲ, ಎಲ್ಲರಿಗೂ ಗೊತ್ತಾಯಿತು. ಸೇರಿದ ಅಷ್ಟೂ ಮಂದಿ ಬಿದ್ದು ಬಿದ್ದು ನಕ್ಕರು. ಆ ಗಳಿಗೆಯಲ್ಲಿ ರಾವಣನಂಥ ದಶಕಂಠನೇ ಸಭಿಕರ ಮುಂದೆ ಹಾಸ್ಯಗಾರನಾಗಿಬಿಟ್ಟಿದ್ದ. ಹಾಗಾಗಿ ರಂಗದ ಮೇಲೆ ಬರುವಾಗ ಬಹಳ ಜಾಗ್ರತೆಯಿರಬೇಕು.

ಹಾಗಂತ ಎಲ್ಲಾ ಹವ್ಯಾಸಿಗಳೂ ಹೀಗೆ ಅಂತಲ್ಲ. ಬಹಳಷ್ಟು ಹವ್ಯಾಸಿಗಳು ಮೇಳದ ಕಲಾವಿದರಿಗಿಂತಲೂ ಹೆಚ್ಚಿನ ಪ್ರಬುದ್ಧತೆಯನ್ನು ಹೊಂದಿದವರಿದ್ದರು ಮತ್ತು ಇದ್ದಾರೆ. ಆದರೂ ಅಲ್ಲೊಮ್ಮೆ ಇಲ್ಲೊಮ್ಮೆ ಹೀಗೂ ಆಗುತ್ತದೆ! ■

---




**ಕೆ**ಳೆದ ಕೆಲವು ಸಮಯದಿಂದ ನೂಪುರವನ್ನು ಓದುತ್ತಿದ್ದೇನೆ. ನನ್ನನ್ನು ಬೆರಗುಗೊಳಿಸಿದ ಒಂದು ಸಂಗತಿ ಎಂದರೆ ಪತ್ರಿಕೆ ಖಾಸಗಿ ಪ್ರಸಾರದ್ದಾದರೂ ಹಗುರವಾಗಿ ತೆಗೆದುಕೊಳ್ಳಲಾಗದ ಪತ್ರಿಕೆಗಳ ಸಾಲಿಗೆ ಸೇರಿರುವುದು. ನೂಪುರದಲ್ಲಿ ಬರುವ ಚಿಂತನ–ಮಂಥನ, ವಾದವಿವಾದಗಳ ವೈಖರಿ, ಅದನ್ನು ಬರೆಯುವವರನ್ನು ಪರಿಗಣಿಸಿದರೆ ಪತ್ರಿಕೆಯ ಪ್ರತೀ ಪುಟವೂ ಮೌಲ್ಯಯುತವಾದದ್ದು. ನೂಪುರ ಭ್ರಮರಿ ಗೆದ್ದಿದೆ; ಮಾತ್ರವಲ್ಲ, ಪೂರ್ಣ ಭ್ರಾಮಕ ನೃತ್ಯವನ್ನು ಮನದಲ್ಲಿ ಮೂಡಿಸಿದೆ.

**– ಉದಯ ಪೆರುವಾಜೆ,**

**ಕಾಂಟಿನೆಂಟಲ್ ಟೆಕ್ನಿಕಲ್ ಸೆಂಟರ್ ಇಂಡಿಯಾ, ಬೊಮ್ಮನಹಳ್ಳಿ, ಬೆಂಗಳೂರು.**

ನೂಪುರದ ಶರದ್ ವೈಭವ ಸಂಚಿಕೆ ಬಹಳ ಚೆನ್ನಾಗಿತ್ತು. 'ಶಾಸ್ತ್ರೀಯ ನೃತ್ಯದ ಮಹತ್ವ ಮರೆಯಾಗುತ್ತಿಹುದೇ?' ಲೇಖನ ಉತ್ತಮ ಮಾಹಿತಿಯನ್ನೊಳಗೊಂಡಿತ್ತು. ದೀವಟಿಗೆ, ಅಂಗಳದ ಮಾತು ತಿಂಗಳ ಚರ್ಚೆ, ರಂಗಸ್ಥಳ, ಒಳನೋಟ ಎಲ್ಲವೂ ಉಪಯುಕ್ತವಾಗಿದೆ. ರಂಗಸ್ಥಳದಲ್ಲಿ ರಾಕೇಶ್ ಕುಮಾರ್ ಕಮ್ಮಜೆಯವರ ಲೇಖನ ಚಿಟ್ಟಾಣಿಯವರ ಬಗ್ಗೆ ಉತ್ತಮ ಮಾಹಿತಿಯನ್ನೊದಗಿಸಿತು. ಮುಂದಿನ ಸಂಚಿಕೆಗೆ ಕಾಯುವಂತೆ ಮಾಡಿದೆ.

**–ವಿನುತಾ. ಡಿ.**

**ದ್ವಿತೀಯ ಪತ್ರಿಕೋದ್ಯಮ ವಿಭಾಗ, ವಿವೇಕಾನಂದ ಕಾಲೇಜು, ಪುತ್ತೂರು.**

ನಾನು ಗೆಲ್ಲಬೇಕು ; ಅಂಥದೊಂದು ಹಠ ಬಂದುಬಿಟ್ಟರೆ– ಕೈ ಇಲ್ಲದವನೂ ಗಿಟಾರ್ ನುಡಿಸುತ್ತಾನೆ, ಕಾಲಿಲ್ಲದವನೂ ಈಜಿಯೇ ಸಪ್ತಸಾಗರ ದಾಟುತ್ತಾನೆ, ಮೂಗನೂ ಹಾಡು ಹೇಳುತ್ತಾನೆ, ಅಕ್ಷರದ ಗಂಧವೇ ಇಲ್ಲದವನೂ ಕಾದಂಬರಿ ಬರೆಯುತ್ತಾನೆ. ಸಣಕಲ, ತೊಣಪನನ್ನು ಚಿತ್ ಮಾಡುತ್ತಾನೆ. Impossible ಎಂಬ ಪದದೊಳಗೇ possible ಎಂಬುದೂ ಇದೆ. ಹಾಗಾಗಿ ಸಾಧನೆಗೆ ಅಸಾಧ್ಯವಾದುದು ಯಾವುದೂ ಇಲ್ಲ... ಇಂಥದೊಂದು ನಿರ್ಧಾರದೊಂದಿಗೆ ಎದ್ದು ನಿಂತವನಿಗೆ ಆಕಾಶವೊಂದು ಮಿತಿಯಲ್ಲ, ಸಾಗರದ ಆಳ ಲೆಕ್ಕಕ್ಕೇ ಇರುವುದಿಲ್ಲ.

ಸೋಲನ್ನು ಮೇಲಿಂದ ಮೇಲೆ ಸೋಲಿಸುವ; ಆ ಮೂಲಕ ಗೆಲುವೇ ನಮ್ಮ ಬದುಕು ಎಂದು ಹೆಮ್ಮೆಯಿಂದ ಹೇಳುವ; ತಮ್ಮ ಸಾಧನೆಯಿಂದಲೇ ಹಲವರ ಆದರ್ಶವಾಗುವ ಹೀರೊಗಳು ನಮ್ಮ ಮಧ್ಯೆಯೇ ಇದ್ದಾರೆ... ಅಂತಹ ಮಹಾನ್ ಕಾರ್ಯ ನೂಪುರ ಭ್ರಮರಿಯಿಂದ ಮತ್ತು ಬಳಗದ ಪ್ರಯತ್ನದಿಂದ ನಡೆಯಲಿ ಎಂದು ನಾನು ಆಶಿಸುತ್ತೇನೆ.

**– ಗಣೇಶ್ ಭಟ್ ಮಾಡಾವು, ಬೆಳ್ಳಾರೆ.**

ನೂಪುರ ಭ್ರಮರಿ ನಮ್ಮ ಕಾಲದೊಂದು ಅಚ್ಚರಿ.

**–ಜಗದೀಶ ಶರ್ಮ, ಬೆಂಗಳೂರು.** ■